## ಕರ್ನಾಟಕ ಪಶುರೋಗಗಳ (ನಿಯಂತ್ರಣ) ಅಧಿನಿಯಮ, 1961

ವಿಷಯಾನುಕ್ರಮಣಿಕೆ

**ಅಧ್ಯಾಯ – I**

**ಪ್ರಾರಂಭಿಕ**

ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಗಳು

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಪಶುವೈದ್ಯ ಅಧಿಕಾರಿಗಳ ಮತ್ತು ಇನ್ಸ್‌ಪೆಕ್ಟರುಗಳ ನೇಮಕ
4. ಪಶುವೈದ್ಯ ಅಧಿಕಾರಿಗಳು ಮತ್ತು ಇನ್ಸ್‌ಪೆಕ್ಟರುಗಳು ಸರಕಾರಿ ನೌಕರರಾಗಿರುವುದು.

**ಅಧ್ಯಾಯ – II**

**ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣ**

5. ಪಶುಗಳಿಗೆ ತಡೆಮದ್ದು ಚುಚ್ಚುವ ಮತ್ತು ಅವುಗಳ ಚಲನೆಗಳನ್ನು ಕ್ರಮಗೊಳಿಸುವ ಮತ್ತು ಮಾರುಕಟ್ಟೆ, ಜಾತ್ರೆ ಇತ್ಯಾದಿಗಳನ್ನು ನಡೆಸುವುದನ್ನು ಮತ್ತು ಸಾಂಕ್ರಾಮಿಕ ಪಶುಗಳ ವ್ಯಾಪಾರವನ್ನು ನಿಯಂತ್ರಣಗೊಳಿಸುವ ಅಧಿಕಾರ
6. ಸಾಂಕ್ರಾಮಿಕ ಪಶುಗಳನ್ನು ಬೇರೆ ಇರಿಸಲು ಅಧಿಕಾರ ಮತ್ತು ಅವುಗಳ ಪರೀಕ್ಷೆ ಮತ್ತು ಚಿಕಿತ್ಸೆ
7. ಸಾಂಕ್ರಾಮಿಕ ಖಾಸಗಿ ಸ್ಥಳಗಳ ಘೋಷಣೆ ಮತ್ತು ಪಶುವೈದ್ಯ ಅಧಿಕಾರಿಯಿಂದ ಇಂಥ ಸ್ಥಳಗಳ ಪರೀಕ್ಷೆ
8. ಸಾಂಕ್ರಾಮಿಕ ಸಾರ್ವಜನಿಕ ಸ್ಥಳದ ಘೋಷಣೆ
9. ಸಾಂಕ್ರಾಮಿಕ ಪ್ರದೇಶವೆಂದು ಘೋಷಿಸಲು ರಾಜ್ಯ ಸರಕಾರದ ಅಧಿಕಾರ
10. ಸಾಂಕ್ರಾಮಿಕವಾದ ಪ್ರದೇಶಗಳಿಂದ ಅಥವಾ ಸ್ಥಳಗಳಿಂದ ಲೈಸೆನ್ಸು ಇಲ್ಲದೆ ಪಶುಗಳ ಅಥವಾ ಇತರ ವಸ್ತುಗಳ ಸಾಗಾಣಿಕೆಯನ್ನು ಪ್ರತಿಬಂಧಿಸುವುದು
11. ಸಾಂಕ್ರಾಮಿಕ ಪ್ರದೇಶಗಳಿಂದ ಲೈಸೆನ್ಸಿಲ್ಲದೆ ತರಲಾದ ಪಶು ಇತ್ಯಾದಿಗಳನ್ನು ವಾಪಸ್ಸು ಮಾಡಲು ಅಗತ್ಯಪಡಿಸುವ ಅಧಿಕಾರ
12. ಸಾಂಕ್ರಾಮಿಕವಾದ ಸ್ಥಳಗಳಲ್ಲಿ ಮತ್ತು ಪ್ರದೇಶಗಳಲ್ಲಿ ನಿರೋಧಕ ಸಿಡುಬು ಹಾಕುವುದು ಅಥವಾ ತಡೆಮದ್ದು ಚುಚ್ಚುವುದು
13. ದೋಣಿಗಳನ್ನು ಮತ್ತು ವಾಹನಗಳನ್ನು ಸ್ವಚ್ಛ ಮಾಡುವುದು ಮತ್ತು ನಿಸ್ಸಾಂಕ್ರಾಮಿಕಗೊಳಿಸುವುದು.
14. ಸಾಂಕ್ರಾಮಿಕವಾದ ಆವರಣಗಳನನ್ನು, ದೋಣಿಗಳನ್ನು ಅಥವಾ ವಾಹನಗಳನ್ನು ನಿಸ್ಸಾಂಕ್ರಾಮಿಕಗೊಳಿಸುವುದು
15. ಮರಣೋತ್ತರ ಶವ ಪರೀಕ್ಷೆಯನ್ನು ನಡೆಸಲು ಪಶುವೈದ್ಯ ಅಧಿಕಾರಿಯ ಅಧಿಕಾರ
16. ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ವರದಿ ಕೊಡುವುದು ಕೆಲವೊಂದು ವ್ಯಕ್ತಿಗಳ ಕರ್ತವ್ಯ
17. ಸಾಂಕ್ರಾಮಿಕವಾದ ಪಶುಗಳನ್ನು ಪ್ರತ್ಯೇಕಿಸಿಡಬೇಕಾದ ಕರ್ತವ್ಯ
18. ಪ್ರವೇಶದ ಮತ್ತು ಪರಿಶೀಲನೆಯ ಅಧಿಕಾರಗಳು
19. ಸಾಂಕ್ರಾಮಿಕ ಪಶುಗಳ ಶವಗಳ ಹೂಳುವಿಕೆಯ ಅಥವಾ ವಿಲೇವಾರಿಯ ರೀತಿ

20. ಸಾಂಕ್ರಾಮಿಕ ಪ್ರದೇಶಗಳಲ್ಲಿ ಮಾರುಕಟ್ಟೆ, ಜಾತ್ರೆ ಇತ್ಯಾದಿಗಳಿಗೆ ಪ್ರತಿಬಂಧ
21. ಸಾಂಕ್ರಾಮಿಕ ಪಶುಗಳನ್ನು ಪರೀಕ್ಷೆಗಳಿಗೆ ಒಳಪಡಿಸಲು ಪಶುವೈದ್ಯ ಅಧಿಕಾರಿಯ ಅಧಿಕಾರಗಳು


**ಅಧ್ಯಾಯ – III**

**ಅಪರಾಧಗಳು ಮತ್ತು ದಂಡನೆ**


22. ದಂಡಗಳು
23. ಸಾಂಕ್ರಾಮಿಕ ಪಶುಗಳನ್ನು ಸುತ್ತುಕಟ್ಟು ಹಾಕಿರದ ಭೂಮಿಯಲ್ಲಿ ಇರಿಸುವ ಅಥವಾ ಮೇಯಿಸುವ ಬಗ್ಗೆ ದಂಡ
24. ಸಾಂಕ್ರಾಮಿಕ ಪಶುಗಳನ್ನು ಮಾರುಕಟ್ಟೆಗೆ ತರುವ ಬಗ್ಗೆ ದಂಡ
25. ಸಾಂಕ್ರಾಮಿಕ ಪಶುವಿನ ಮೃತದೇಹವನ್ನು ನದಿ ಇತ್ಯಾದಿಗಳಲ್ಲಿ ಇರಿಸುವ ಬಗ್ಗೆ ದಂಡ
26. ರೋಗಗ್ರಸ್ತ ಪಶುವಿನ ಮೃತದೇಹವನ್ನು ಅಗೆದು ತೆಗೆಯುವ ಬಗ್ಗೆ ದಂಡ
27. ಸಾಂಕ್ರಾಮಿಕ ಪಶುಗಳ ಮಾರಾಟದ ಅಥವಾ ಹಸ್ತಾಂತರದ ಬಗ್ಗೆ ದಂಡ
28. ಪೀಡನೆಗಾಗಿ ಪ್ರವೇಶ, ಪರಿಶೀಲನೆ ಅಥವಾ ವಶಪಡಿಸುವಿಕೆ ಇವುಗಳ ಬಗ್ಗೆ ದಂಡ


**ಅಧ್ಯಾಯ – IV**

**ಸಂಕೀರ್ಣ**


29. ಆದೇಶಗಳನ್ನು ಪಾಲಿಸಲು ಮತ್ತು ಜಾರಿಗೊಳಿಸಲು ಅವಧಿ
30. ವಾರಂಟು ಇಲ್ಲದೇ ದಸ್ತಗಿರಿ ಮಾಡಲು ಪೊಲೀಸ್ ಅಧಿಕಾರಿಯ ಅಧಿಕಾರ
31. ಅಪರಾಧಗಳ ಸಂಜ್ಞೇಯತೆ
32. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ
33. ಪರಿಹಾರದ ಕ್ಲೇಮಿನ ಪ್ರತಿಬಂಧ
34. ಈ ಅಧಿನಿಯಮದ ಮೇರೆಗೆ ಕ್ರಮ ಕೈಕೊಳ್ಳುವ ಅಧಿಕಾರಿಗಳ ರಕ್ಷಣೆ
35. ಕೆಲವೊಂದು ದಾವೆಗಳ ಮತ್ತು ಪ್ರಾಸಿಕ್ಯೂಷನ್‌ಗಳ ಬಗ್ಗೆ ಅವಧಿ ನಿರ್ಣಯ
36. ನಿಯಮಗಳನ್ನು ರಚಿಸಲು ಅಧಿಕಾರ
37. ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸಬೇಕಾದುದು
38. ನಿರಸನ ಮತ್ತು ಉಳಿಸುವಿಕೆಗಳು

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1961ರ ಅಧಿನಿಯಮ 18.-** ರಾಜ್ಯದ ಮದ್ರಾಸ್ ಪ್ರದೇಶ, ಬಾಂಬೆ ಪ್ರದೇಶ, ಕೊಡಗು ಜಿಲ್ಲೆ ಮತ್ತು ಮೈಸೂರು ಪ್ರದೇಶಗಳಲ್ಲಿ ಜಾನುವಾರುಗಳ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಲು ಮತ್ತು ನಿಯಂತ್ರಿಸಲು ಈ ಕೆಳಕಂಡ ವಿವಿಧ ಅಧಿನಿಯಮಗಳು ಜಾರಿಯಲ್ಲಿವೆ:-

1. ಬಾಂಬೆ ಪಶು ಸಾಂಕ್ರಾಮಿಕ ರೋಗಗಳ (ನಿಯಂತ್ರಣ) ಅಧಿನಿಯಮ, 1948
2. ಮದ್ರಾಸ್ ಪಶುರೋಗಗಳ ಅಧಿನಿಯಮ, 1866
3. ಮದ್ರಾಸ್ ಗೋಮಾರಿ ರೋಗ ಅಧಿನಿಯಮ, 1940
4. ಕೊಡಗು ಪಶು ಸಾಂಕ್ರಾಮಿಕ ರೋಗಗಳ ಅಧಿನಿಯಮ, 1941
5. ಮೈಸೂರು ಪಶುಗಳ ರೋಗಗಳ ಅಧಿನಿಯಮ, 1949
6. ಗ್ಲಾಂಡರ್ಸ್ ಮತ್ತು ಫ್ಯಾರ್ಸಿ ಅಧಿನಿಯಮ, 1899
7. ಡೌರಿನ್ ಅಧಿನಿಯಮ, 1910

ಇಡೀ ರಾಜ್ಯಕ್ಕೆ ಅನ್ವಯವಾಗುವ ಒಂದೇ ಸಂಯೋಜಿತ ಶಾಸನವನ್ನು ರಚಿಸುವುದು ಅಗತ್ಯವಾಗಿರುವಂತೆ, ಈ ಅಧಿನಿಯಮವನ್ನು ವಿಧಾನ ಮಂಡಲದ ಮುಂದೆ ಮಂಡಿಸಲಾಗಿದೆ.ಈ ಅಧಿನಿಯಮವು, ವಿವಿಧ ಪ್ರದೇಶಗಳಲ್ಲಿ ಈಗ ಜಾರಿಯಲ್ಲಿರುವ ಅಧಿನಿಯಮಗಳಲ್ಲಿ ಒಳಗೊಂಡಿರುವ ಎಲ್ಲಾ ಅವಶ್ಯಕ ಉಪಬಂಧಗಳನ್ನು ಹೊಂದಿರುವುದು.

ಜಾನುವಾರು, ಸಾಂಕ್ರಾಮಿಕ ರೋಗಗಳ ಸಮೂಹಕ್ಕೆ ಬಲಿಯಾಗುವ ಸಂಭವವಿದ್ದು ಮತ್ತು ಈ ರೋಗಗಳ ದಾಳಿಗಳಿಂದ ಅವುಗಳನ್ನು ರಕ್ಷಿಸುವ ಸಲುವಾಗಿ, ಆ ರೋಗಳು ಬರುವುದನ್ನು ಪ್ರತಿಬಂಧಿಸಲು ಮತ್ತು ಆರೋಗ್ಯ ಪ್ರದೇಶಕ್ಕೆ ಅವುಗಳು ಹಬ್ಬುವುದನ್ನು ತಡೆಯಲು ಪ್ರಾಮಾಣಿಕ ಕ್ರಮಗಳನ್ನು ಕೈಗೊಳ್ಳಬೇಕಾಗುವುದು.

ಅವುಗಳಲ್ಲಿನ ಕೆಲವು ಹಂತಗಳು ಇಂತಿವೆ:-

(1) ಸೋಂಕು ತಗುಲಿದ ಪ್ರಾಣಿಗಳನ್ನು ಬೇರ್ಪಡಿಸುವುದು ಮತ್ತು ಆರೋಗ್ಯಕರ ಪ್ರದೇಶಕ್ಕೆ ಸೋಂಕು ಹರಡುವುದನ್ನು ತಡೆಗಟ್ಟಲು ಅಂಥ ಬೇನೆಗೆ ತುತ್ತಾದ ಪ್ರಾಣಿಗಳನ್ನು ಇತರೆ ಭಾಗಗಳಿಗೆ ಚಲಿಸುವುದನ್ನು ನಿರ್ಬಂಧಿಸುವುದು.

(2) ಸಾಂಕ್ರಾಮಿಕ ರೋಗವು ಉಲ್ಬಣಗೊಂಡ ಪ್ರದೇಶಗಳಲ್ಲಿ ಭಾರೀ ಪ್ರಮಾಣದಲ್ಲಿ ಜಾನುವಾರು ಸೇರುವಿಕೆಯನ್ನು, ಅಂದರೆ ಧನದ ಜಾತ್ರೆಗಳು, ರಥೋತ್ಸವಗಳನ್ನು ನಿಷೇಧಿಸುವುದು.

(3) ರೋಗದಿಂದ ಜಾನುವಾರನ್ನು ರಕ್ಷಿಸಲು ಪ್ರತಿಬಂಧಕ ಚುಚ್ಚುಮದ್ದುಗಳನ್ನು ಹಾಕಿಸುವುದು.

(4)ಸೋಂಕಿತ ಪ್ರಕರಣಗಳಲ್ಲಿ ಪರಿಣಾಮಕಾರಿ ಚಿಕಿತ್ಸೆ ಕೈಗೊಳ್ಳುವುದು.

(5) ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ರೋಗದಿಂದ ಸತ್ತ ಪ್ರಾಣಿಗಳ ಮೃತದೇಹಗಳನ್ನು ಸಮರ್ಪಕವಾಗಿ ವಿಲೆ ಮಾಡುವುದು

ಆದ್ದರಿಂದ, ಈ ವಿಧೇಯಕ.

(1959ರ ಜುಲೈ 21ನೇ ದಿನಾಂಕದ ಅಧಿಸೂಚನೆ ಸಂ. 600 ವಿ.ಪ.ದಿಂದ ಪಡೆಯಲಾಗಿದೆ ಕಡತ ಸಂಖ್ಯೆ ಲಾ 113 ಎಲ್ ಜಿ ಎಸ್ 1958)

## 1961 ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ 18

(1961ರ ಸೆಪ್ಟೆಂಬರ್ ಹದಿನಾಲ್ಕನೆಯ ದಿನಾಂಕದಂದು ಕರ್ನಾಟಕ ರಾಜ್ಯಪತ್ರದಲ್ಲಿ ಮೊದಲು ಪ್ರಕಟಿಸಲ್ಪಟ್ಟಿದೆ.)

## [1][ಕರ್ನಾಟಕ][1] ಪಶುರೋಗಗಳ (ನಿಯಂತ್ರಣ) ಅಧಿನಿಯಮ, 1961

(1961ರ ಸೆಪ್ಟೆಂಬರ್ ಏಳನೇಯ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆದಿದೆ.)

[1][ಕರ್ನಾಟಕ ರಾಜ್ಯದಲ್ಲಿ][1] ಪಶುಗಳಿಗೆ ಬಾಧಿಸುವ ಸೋಂಕು ಮತ್ತು ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧಿಸುವ ಅಧಿನಿಯಮ

[1][ಕರ್ನಾಟಕ ರಾಜ್ಯದಲ್ಲಿ][1] ಪಶುಗಳಿಗೆ ಬಾಧಿಸುವ ಸೋಂಕು ಮತ್ತು ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣಕ್ಕಾಗಿ ಉಪಬಂಧ ಕಲ್ಪಿಸುವುದು ಯುಕ್ತವಾಗಿರುವುದರಿಂದ :

ಭಾರತ ಗಣರಾಜ್ಯದ ಹನ್ನೆರಡನೆಯ ವರ್ಷದಲ್ಲಿ [1][ಕರ್ನಾಟಕ ರಾಜ್ಯ][1]ವಿಧಾನ ಮಂಡಲದಿಂದ ಮುಂದೆ ಹೇಳಿರುವಂತೆ ಅಧಿನಿಯಮಿಸಲಾಗಿದೆ.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿ.01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

### ಅಧ್ಯಾಯ – 1
### ಪ್ರಾರಂಭಿಕ

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು [1][ಕರ್ನಾಟಕ][1] ಪಶು ರೋಗಗಳ (ನಿಯಂತ್ರಣ) ಅಧಿನಿಯಮ, 1961 ಎಂದು ಕರೆಯತಕ್ಕದ್ದು.

(2) ಇದು, ಇಡೀ [1][ಕರ್ನಾಟಕ ರಾಜ್ಯಕ್ಕೆ][1]ವ್ಯಾಪ್ತವಾಗತಕ್ಕದ್ದು.

(3) 38ನೇಯ ಪ್ರಕರಣದಿಂದ ನಿರಸನಗೊಳಿಸಲಾದ ಅಧಿನಿಯಮಗಳು ಜಾರಿಯಲ್ಲಿರುವ ಪ್ರದೇಶಗಳಲ್ಲಿ ಈ ಕೂಡಲೇ ಜಾರಿಗೆಬರತಕ್ಕದ್ದು; ಮತ್ತು ಯಾವುದೇ ಇತರ ಪ್ರದೇಶದಲ್ಲಿ ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ[1][ದಿನಾಂಕ][1]ದಿಂದ ಜಾರಿಗೆ ಬರತಕ್ಕದ್ದು.

1. ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿ.01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.
2. ದಕ್ಷಿಣ ಕನ್ನಡ ಭಾಗದಲ್ಲಿ ದಿನಾಂಕ:26.12.1963 ರಂದು ಅಧಿಸೂಚನೆಯ ಮೂಲಕ ಜಾರಿಗೆಬರತಕ್ಕದ್ದು. ಅಧಿನಿಯಮವು (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ 01.02.2000 ರಿಂದ ಅಧಿಸೂಚನೆಯ ಮೂಲಕ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು.-**ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಪಶು" ಎಂದರೆ.-

(1) ಗೂಳಿಗಳು, ಹೋರಿಗಳು, ಹಸುಗಳು, ಎತ್ತುಗಳು, ಮಣಕಗಳು, ಕರುಗಳು, ಎಮ್ಮೆಗಳು, ಕೋಣಗಳು, ಆನೆಗಳು, ಕುರಿಗಳು, ಆಡುಗಳು ಮತ್ತು ರಾಜ್ಯ ಸರಕಾರವು ಈ ಬಗ್ಗೆ ಅಧಿಸೂಚಿಸಬಹುದಾದ ಎಲ್ಲಾ ಇತರೇ ಮೆಲುಕುಹಾಕುವ ಪಶುಗಳು ಸೇರುತ್ತವೆ: ಮತ್ತು

(2) ನಾಯಿಗಳು, ಹಂದಿಗಳು, ಕುದುರೆಗಳು, ಒಂಟೆಗಳು, ಕತ್ತೆಗಳು, ಹೇಸರಗತ್ತೆಗಳು, ಕೋಳಿಗಳು ಮತ್ತು ರಾಜ್ಯ ಸರ್ಕಾರವು ಈ ಬಗ್ಗೆ ಅಧಿಸೂಚಿಸಬಹುದಾದಂಥ ಎಲ್ಲ ಸಾಕು ಪ್ರಾಣಿಗಳು:

(ಬಿ) "ಸೋಂಕು ಅಥವಾ ಸಾಂಕ್ರಾಮಿಕ ರೋಗಗಳು'' ಎಂದರೆ, ಗೋಮಾರಿ ರೋಗ, ನೆರಡಿ ರೋಗ, ಗಳಲೆ ರೋಗ, ನಾಯಿ ಹುಚ್ಚು ರೋಗ, (ಕುದುರೆ) ಸಿಂಬಳರೋಗ ಮತ್ತು ರಸಗ್ರಂಥಿಗಳು ರೋಗ, ಸಿಡುಬು ಸ್ರಾವದ ಸಾಂಕ್ರಾಮಿಕ ರೋಗ, ಸುರಾ, ಡೌರಿನು, ಕುದುರೆಗಳ ಇನ್‌ಪ್ಲುಯೆಂಝು ಅಥವಾ ಕೆಂಗಣ್ಣೂತ, ಕುರಿ, ಸಿಡುಬು, ರಾಣಿ ಖೇತರೋಗ, ರಪ್ಪೆರೋಗ, ಕಾಲು ಬಾಯಿ ರೋಗ, ಕ್ಷಯ ರೋಗ, ಜಾನ್ ರೋಗ ಮತ್ತು ರಾಜ್ಯ ಸರಕಾರವು ಅಧಿಸೂಚಿಸಬಹುದಾದಂಥ ಇತರ ರೋಗಗಳು ಸೇರುತ್ತವೆ.

(ಸಿ) "ಸೋಂಕು ಇರುವ ಪ್ರದೇಶ'' ಎಂದರೆ, 9ನೇಯ ಪ್ರಕರಣದ ಮೇರೆಗೆ ಸೋಂಕು ಇರುವ ಪ್ರದೇಶವೆಂದು ಘೋಷಿಸಲಾದ ಪ್ರದೇಶ ;

(ಡಿ) "ಸೋಂಕು ತಗುಲಿದ ಪಶು'' ಎಂದರೆ, ಸೋಂಕು ಅಥವಾ ಸಾಂಕ್ರಾಮಿಕ ರೋಗ ತಗುಲಿದ, ಅಥವಾ, ಹಾಗೆ ತಗುಲಿದ ಪಶುವಿನ ಸಂಪರ್ಕದಲ್ಲಿ ಅಥವಾ ತೀರ ಹತ್ತಿರದಲ್ಲಿ ಇತ್ತೀಚೆಗೆ ಇದ್ದಿರುವ ಪಶು ;

(ಇ) ''ಇನ್ಸ್‌ಪೆಕ್ಟರು'' ಎಂದರೆ, 3ನೇ ಪ್ರಕರಣದ ಮೇರೆಗೆ ನೇಮಿಸಲಾದ ಅಥವಾ ಶಕ್ತಗೊಳಿಸಲಾದ ಇನ್ಸ್‌ಪೆಕ್ಟರು ;

(ಎಫ್) "ಅಧಿಸೂಚನೆ'' ಎಂದರೆ, ಸರ್ಕಾರಿ ರಾಜಪತ್ರದಲ್ಲಿ ಪ್ರಕಟಿಸಲಾದ ಅಧಿಸೂಚನೆ ;

(ಜಿ) "ನಿಯಮಿಸಲಾದ'' ಎಂದರೆ, ಈ ಅಧಿನಿಯಮದ ಮೇರೆಗೆ ರಚಿಲಾದ ನಿಯಮಗಳ ಮೂಲಕ ನಿಯಮಿಸಲಾದುದು;

(ಹೆಚ್) "ನಿಯಮಗಳು'' ಎಂದರೆ, 36ನೇಯ ಪ್ರಕರಣದ ಮೇರೆಗೆ ರಚಿಸಲಾದ ನಿಯಮಗಳು ;

(ಐ) "ಪಶು ವೈದ್ಯಾಧಿಕಾರಿ" ಎಂದರೆ 3ನೇಯ ಪ್ರಕರಣದ ಮೇರೆಗೆ ನೇಮಿಸಲಾದ ಅಧಿಕಾರಿ.

**3. ಪಶು ವೈದ್ಯಾಧಿಕಾರಿಗಳ ಮತ್ತು ಇನ್ಸ್‌ಪೆಕ್ಟರುಗಳ ನೇಮಕ**.- (1) ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಪಶುವೈದ್ಯದಲ್ಲಿಯುಕ್ತವಾಗಿ ಅರ್ಹತೆ ಹೊಂದಿದ ವ್ಯಕ್ತಿಯನ್ನು, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸ್ಥಳೀಯ ಪ್ರದೇಶಕ್ಕಾಗಿ ಈ ಅಧಿನಿಯಮ ಉದ್ದೇಶಗಳಿಗಾಗಿ ಪಶು ವೈದ್ಯಾಧಿಕಾರಿಯೆಂದು ನೇಮಿಸಬಹುದು.

(2) ರಾಜ್ಯ ಸರಕಾರ ಅಥವಾ ಈಬಗ್ಗೆ ಅಧಿಕೃತಗೊಳಿಸಲಾದ ಯಾರೇ ಅಧಿಕಾರಿಯು, ಪಶುವೈದ್ಯ ಶಾಸ್ತ್ರದಲ್ಲಿ ಯುಕ್ತವಾಗಿ ಅರ್ಹತೆ ಪಡೆದ ಯಾರೇ ವ್ಯಕ್ತಿಯನ್ನು ಈ ಅಧಿನಿಯಮದ ಎಲ್ಲ ಅಥವಾ ಯಾವುದೇ ಉದ್ದೇಶಗಳಿಗಾಗಿ ಇನ್ಸ್‌ಪೆಕ್ಟರ್‌ನೆಂದು ನೇಮಿಸಬಹುದು ಮತ್ತು ಈ ಅಧಿನಿಯಮದ ಮೇರೆಗೆ ಆತನು ಯಾವ ಪ್ರದೇಶದಲ್ಲಿ ಇನ್ಸ್‌ಪೆಕ್ಟರ್‌ನಿಗಿರುವ ಅಧಿಕಾರಗಳನ್ನು ಚಲಾಯಿಸತಕ್ಕದ್ದೋ ಮತ್ತು ಆತನ ಕರ್ತವ್ಯಗಳನ್ನು ನೆರವೇರಿಸತಕ್ಕುದ್ದೋ ಆ ಪ್ರದೇಶವನ್ನು ನಿರ್ದಿಷ್ಟಪಡಿಸಬಹುದು.

(3) ಪಶು ವೈದ್ಯಾಧಿಕಾರಿಯು ತಾನು ನೇಮಕವಾಗಿರುವ ಪ್ರದೇಶದಲ್ಲಿ ಈ ಅಧಿನಿಯಮದ ಮೇರೆಗೆ ಇನ್ಸ್‌ಪೆಕ್ಟರ್‌ನಿಗಿರುವ ಎಲ್ಲ ಅಧಿಕಾರಿಗಳನ್ನು ಚಲಾಯಿಸತಕ್ಕದ್ದು, ಮತ್ತು ಪಶುವೈದ್ಯಾಧಿಕಾರಿಯಾಗಿ ತನಗಿರುವ ಅಧಿಕಾರದ ಜೊತೆಗೆ ಇಂಥ ಅಧಿಕಾರಗಳನ್ನು ಚಲಾಯಿಸಬಹುದು.

**4. ಪಶು ವೈದ್ಯಾಧಿಕಾರಿಗಳು ಮತ್ತು ಇನ್ಸ್‌ಪೆಕ್ಟರುಗಳು ಸರಕಾರಿ ನೌಕರರಾಗಿರುವುದು**.- ಈ ಅಧಿನಿಯಮದ ಮೇರೆಗೆ ನೇಮಕಗೊಂಡ ಪ್ರತಿಯೊಬ್ಬ ಪಶು ವೈದ್ಯಾಧಿಕಾರಿಯನ್ನು ಮತ್ತು ಪ್ರತಿಯೊಬ್ಬ ಇನ್ಸ್‌ಪೆಕ್ಟರನನ್ನು ಭಾರತ ದಂಡ ಸಂಹಿತೆಯ 21ನೇ ಯ ಪ್ರಕರಣದ ಅರ್ಥದಲ್ಲಿ ಸರಕಾರಿ ನೌಕರರೆಂದು ಭಾವಿಸತಕ್ಕದ್ದು.

## ಅಧ್ಯಾಯ – II

## ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ನಿವಾರಣೆ ಮತ್ತು ನಿಯಂತ್ರಣ

**5. ಪಶುಗಳಿಗೆ ಚುಚ್ಚುಮದ್ದು ನೀಡುವ ಮತ್ತು ಅವುಗಳ ಚಲನವಲನವನ್ನು ನಿಯಂತ್ರಿಸುವ ಮತ್ತು ಸಂತೆ, ಜಾತ್ರೆ ಇತ್ಯಾದಿಗಳನ್ನು ನಡೆಸುವುದನ್ನು ಮತ್ತು ಸೋಂಕು ತಗುಲಿದ ಪಶುಗಳ ಮಾರಾಟವನ್ನು ನಿಯಂತ್ರಿಸುವ ಅಧಿಕಾರ**.- (1) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ಯಾವುದೇ ಪ್ರದೇಶದಲ್ಲಿ ಅಥವಾ ಅಲ್ಲಿಂದ ಯಾವುದೇ ಸೋಂಕು ಅಥವಾ ಸಾಂಕ್ರಾಮಿಕ ರೋಗ ಉಲ್ಬಣಗೊಳ್ಳುವುದನ್ನು ಅಥವಾ ಹರಡುವುದನ್ನು ತಡೆಯುವ ಉದ್ದೇಶಕ್ಕಾಗಿ,-

(ಎ) ಅಂಥ ಪ್ರದೇಶದಲ್ಲಿ ಎಲ್ಲ ಪಶುಗಳಿಗೆ ಅಥವಾ ಅಂಥ ಪಶುಗಳ ಯಾವುದೇ ವರ್ಗಕ್ಕೆ, ನಿಯಮಿಸಬಹುದಾದಂಥ ನಿಯಮಗಳ ಮೇರೆಗೆ ಅಥವಾ ಅಧಿಸೂಚನೆಯಲ್ಲಿ

ನಿರ್ದಿಷ್ಟಪಡಿಸಬಹುದಾದಂಥ ನಿರ್ದೇಶಗಳಿಗನುಸಾರವಾಗಿ ಕಡ್ಡಾಯವಾಗಿ ಚುಚ್ಚುಮದ್ದು ನೀಡತಕ್ಕದ್ದೆಂದು ನಿರ್ದೇಶಿಸಬಹುದು.

(ಬಿ) ರಾಜ್ಯ ಸರಕಾರದ ಅಭಿಪ್ರಾಯದಲ್ಲಿ ಸೋಂಕನ್ನು ಸಾಗಿಸುವ ಜೀವಂತ ಅಥವಾ ಮೃತ ಪಶುಗಳನ್ನು ಅಥವಾ ಆ ಪಶುಗಳ ಅಥವಾ ಅವುಗಳ ಯವುದೇ ಭಾಗಗಳ ಉತ್ಪನ್ನಗಳನ್ನು ಅಥವಾ ಆ ಪಶುಗಳ ಸಲುವಾಗಿ ಉಪಯೋಗಿಸಲಾದ ಯಾವುದೇ ಮೇವನ್ನು, ಹಾಸನ್ನು ಅಥವಾ ಇತರ ವಸ್ತುಗಳನ್ನು (1) ಅಂಥ ಪ್ರದೇಶದೊಳಕ್ಕೆ ಅಥವಾ ರಾಜ್ಯದ ಅಥವಾ ಅದರ ಯಾವುದೇ ಭಾಗದ ಪ್ರದೇಶದೊಳಕ್ಕೆ ತರುವುದನ್ನು, (2) ರಾಜ್ಯದ ಅಥವಾ ಅದರ ಯಾವುದೇ ಭಾಗದ ಅಂಥ ಪ್ರದೇಶದಿಂದ ಇತರ ಯಾವುದೇ ಪ್ರದೇಶಕ್ಕೆ ಸಾಗಿಸುವುದನ್ನು ಅಥವಾ (3) ಅಂಥ ಪ್ರದೇಶದಲ್ಲಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಸಾಗಿಸುವುದನ್ನು ನಿಯಮಿಸಬಹುದಾದಂಥ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಆ ಮಟ್ಟಿಗೆ ನಿಷೇಧಿಸಬಹುದು ಅಥವಾ ನಿಯಂತ್ರಿಸಬಹುದು.

(ಸಿ) ನಿಯಮಿಸಬಹುದಾದಂಥ ಅಥವಾ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ರೀತಿಯಲ್ಲಿ ಮತ್ತು ಆ ಮಟ್ಟಿಗೆ ಅಂಥ ಪ್ರದೇಶದಲ್ಲಿ ಅಥವಾ ಅದರ ಯಾವುದೇ ಭಾಗದಲ್ಲಿ ಅಥವಾ ರಾಜ್ಯದಲ್ಲಿನ ಇತರ ಯಾವುದೇ ಪ್ರದೇಶದಲ್ಲಿ,-

(i) ದನ ಸಂತೆಗಳು, ದನ ಜಾತ್ರೆಗಳು, ದನಗಳ ಪ್ರದರ್ಶನಗಳನ್ನು ನಡೆಸುವುದನ್ನು ಅಥವಾ ಇತರ ದನಗಳ ಸೇರುವಿಕೆಯನ್ನು, ಅಥವಾ

(ii) ಸೋಂಕು ತಗುಲಿದ ಪಶುಗಳ ಅಥವಾ ಅವುಗಳ ಯಾವುವೇ ಉತ್ಪನ್ನಗಳು, ಅಥವಾ ಮರಣಕಾಲದಲ್ಲಿ ಸೋಂಕು ತಗುಲಿದ ಪಶುಗಳ ಮೃತ ದೇಹಗಳು ಅಥವಾ ಅಂಥ ಪಶುಗಳ ಯಾವುವೇ ಭಾಗಗಳು ಅಥವಾ ಅಂಥ ಪಶುಗಳ ಸಂಬಂಧದಲ್ಲಿ ಉಪಯೋಗಿಸಲಾಗುತ್ತಿದ್ದ ರಾಜ್ಯ ಸರಕಾರದ ಅಭಿಪ್ರಾಯದಲ್ಲಿ ಸೋಂಕು ಸಾಗಿಸಬಹುದಾಗಿರುವ ಯಾವುದೇ ಮೇವು, ನೆಲ ಹಾಸು ಅಥವಾ ಇತರ ವಸ್ತು ಇವುಗಳ ಮಾರಾಟವನ್ನು ಅಥವಾ ಅವುಗಳ ವ್ಯಾಪಾರವನ್ನು ನಿಷೇಧಿಸಬಹುದು ಅಥವಾ ನಿಯಂತ್ರಿಸಬಹುದು.

**6. ಸೋಂಕು ತಗುಲಿದ ಪಶುಗಳನ್ನು ಪ್ರತ್ಯೇಕಿಸಿ ಇಡುವ, ತಪಾಸಣೆ ಮಾಡುವ ಮತ್ತು ಚಿಕಿತ್ಸೆ ನೀಡುವ ಅಧಿಕಾರ.-** (1) ಯಾವುದೇ ಪಶುವಿಗೆ ಸೋಂಕುತಗುಲಿದೆಯೆಂದು ನಂಬಲು ಇನ್ಸ್‌ಪೆಕ್ಟರಿಗೆ ಕಾರಣವಿರುವಲ್ಲಿ ಅವನು, ಅಂಥ ಪಶುವಿನ ಮಾಲಿಕನಿಗೆ ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಗೆ, ಲಿಖಿತ ಆದೇಶದ ಮೂಲಕ,-

(ಎ) ಸದ್ಯಕ್ಕೆ ಅದು ಇದ್ದ ಸ್ಥಳದಲ್ಲಿಯೇ ಅದನ್ನು ಇರಿಸಬೇಕೆಂದು ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಬೇರೆ ಇರಿಸುವ ಅಥವಾ ಪ್ರತ್ಯೇಕಿಸಿ ಇರಿಸುವ ಸ್ಥಳಕ್ಕೆ ಅದನ್ನು ಸಾಗಿಸಬೇಕೆಂದು ಅಥವಾ ಸಾಗಿಸಲು ಅವಕಾಶ ಕೊಡಬೇಕೆಂದು;

(ಬಿ) ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಚಿಕಿತ್ಸೆಗೆ ಅದನ್ನು ಒಳಪಡಿಸಬೇಕೆಂದು; ನಿರ್ದೇಶಿಸಬಹುದು.

-ಅಂಥ ಪಶುವಿನ ಮಾಲೀಕ ಅಥವಾ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿದಂಥ ವ್ಯಕ್ತಿಯು ಅಂತ ಆದೇಶವನ್ನು ಪಾಲಿಸತಕ್ಕದ್ದು.

(2) ಯಾರೇ ವ್ಯಕ್ತಿಯು ಪಶುವಿನ ಸ್ವಾಧೀನ ಅಥವಾ ನಿಯಂತ್ರಣವನ್ನು ಹೊಂದಿರದಿದ್ದಲ್ಲಿ ಮತ್ತು ಮಾಲೀಕನು ಯಾರೆಂಬುದು ಗೊತ್ತಿಲ್ಲದಿದ್ದಲ್ಲಿ ಅಥವಾ ಅನುಚಿತ ವಿಳಂಬವಿಲ್ಲದೆ ಅವನನ್ನು ಪತ್ತೆಹಚ್ಚುವುದು ಸಾಧ್ಯವಿರದಿದ್ದಲ್ಲಿ ಅಥವಾ ಅನುಚಿತ ವಿಳಂಬವಿಲ್ಲದೇ ಅವನಿಗೆ ಆದೇಶವನ್ನು ತಿಳಿಸುವುದು ಸಾಧ್ಯವಿರದಿದ್ದಲ್ಲಿ ಅಥವಾ ಅದರ ಸ್ವಾಧೀನ ಅಥವಾ ನಿಯಂತ್ರಣವನ್ನು ಹೊಂದಿರುವ

ವ್ಯಕ್ತಿಯು (1)ನೇ ಉಪ-ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನ ಅಭಿಪ್ರಾಯದಲ್ಲಿ ಯುಕ್ತ ಕಾಲದೊಳಗಾಗಿ ಆದೇಶವನ್ನು ಪಾಲಿಸಲು ತಪ್ಪಿದ್ದಲ್ಲಿ, ಇನ್ಸ್‌ಪೆಕ್ಟರನು ಆ ಪಶುವನ್ನು ವಶಪಡಿಸಿಕೊಳ್ಳತಕ್ಕದ್ದು ಮತ್ತು ಬೇರೆ ಇರಿಸುವ ಅಥವಾ ಪ್ರತ್ಯೇಕಿಸಿ ಇರಿಸುವ ಸ್ಥಳಕ್ಕೆ ಅದನ್ನು ಸಾಗಿಸತಕ್ಕದ್ದು ಮತ್ತು ಅವನು ಅದನ್ನು ಅವಶ್ಯಕವಾಗಬಹುದಾದಂಥ ಚಿಕಿತ್ಸೆಗೆ ಒಳಪಡಿಸಬಹುದು.

(3) ಇನ್ಸ್‌ಪೆಕ್ಟರನು (1) ನೇ ಉಪ-ಪ್ರಕರಣದ ಅಥವಾ (2)ನೇ ಉಪಪ್ರಕರಣದ ಮೇರೆಗೆ ಮಾಡಲಾದ ಪ್ರತಿಯೊಂದು ಆದೇಶದ ಅಥವಾ ವಶಪಡಿಸಿಕೊಳ್ಳುವಿಕೆಯ ಬಗ್ಗೆ ಪಶು ವೈದ್ಯಾಧಿಕಾರಿಗೆ ವರದಿ ಮಾಡತಕ್ಕದ್ದು.

(4) (3)ನೇ ಉಪ-ಪ್ರಕರಣದ ಮೇರೆಗೆ ವರದಿ ಸ್ವೀಕರಿಸಿದ ಮೇಲೆ ಪಶು ವೈದ್ಯಾಧಿಕಾರಿಯು ಸಾಧ್ಯವಾದಷ್ಟು ಬೇಗನೆ, ಆ ಪಶುವನ್ನು ಮತ್ತು ಅದರ ಸಂಪರ್ಕಕ್ಕೆ ಬಂದಿದ್ದ ಅಥವಾ ಅದರ ತೀರ ಹತ್ತಿರದಲ್ಲಿದ್ದ ಎಲ್ಲ ಪಶುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಯಾವುದೇ ಪಶುವನ್ನು ನಿಯಮಿಸಲಾದ ಯಾವುದೇ ಪರೀಕ್ಷೆಗೆ ಒಳಪಡಿಸಬಹುದು.

(5) ಅಂಥ ಪರೀಕ್ಷೆಯ ತರುವಾಯ, ಪಶು ವೈದ್ಯಾಧಿಕಾರಿಯು,-

(ಎ) ಯಾವುದೇ ಪಶುವಿಗೆ ರೋಗದ ಸೋಂಕು ತಗುಲಿರುವುದಿಲ್ಲವೆಂದ ಅಭಿಪ್ರಾಯಪಟ್ಟರೆ, ಇನ್ಸ್‌ಪೆಕ್ಟರನು ತನ್ನ ಅಭಿಪ್ರಾಯದಲ್ಲಿ ಅದರ ಸ್ವಾಧೀನಕ್ಕೆ ಹಕ್ಕುಳ್ಳ ವ್ಯಕ್ತಿಗೆ ಅದನ್ನು ಕೂಡಲೇ ಮರಳಿಸತಕ್ಕದ್ದು;

ಪರಂತು, ಇನ್ಸ್‌ಪೆಕ್ಟರನ ಅಭಿಪ್ರಾಯದಲ್ಲಿ, ಅಂಥ ವ್ಯಕ್ತಿಯು ಪತ್ತೆಯಾಗದಿದ್ದಲ್ಲಿ ಅವನು ಆ ಪಶುವನ್ನು ಅತಿ ಸಮೀಪದ ದನಗಳ ದೊಡ್ಡಿಗೆ ಕಳುಹಿಸತಕ್ಕದ್ದು ಅಥವಾ ನಿಯಮಿಸಬಹುದಾದಂಥ ಇತರೆ ರೀತಿಯಲ್ಲಿ ಅದರ ಬಗ್ಗೆ ವ್ಯವಹರಿಸಿತಕ್ಕದ್ದು;

(ಬಿ) ಯಾವುದೇ ಪಶುವಿಗೆ ಸೋಂಕು ಅಥವಾ ಸಾಂಕ್ರಾಮಿಕ ರೋಗವು ತಗುಲಿದೆ ಎಂದು ಲಿಖಿತದಲ್ಲಿ ಪ್ರಮಾಣೀಕರಿಸಿದರೆ, ಇನ್ಸ್‌ಪೆಕ್ಟರನು ಆ ಪಶುವನ್ನು ನಾಶಮಾಡತಕ್ಕದ್ದು ಅಥವಾ ನಿಯಮಿಸಬಹುದಾದಂಥ ಇತರ ರೀತಿಯಲ್ಲಿ ಅದರ ಬಗ್ಗೆ ವ್ಯವಹರಿಸಿತಕ್ಕದ್ದು; ಅಥವಾ

(ಸಿ) ಯಾವುದೇ ಪಶುವಿಗೆ ಸೋಂಕು ತಗುಲಿದರೂ ಅದು ಸೋಂಕು ಅಥವಾ ಸಾಂಕ್ರಾಮಿಕ ರೋಗದಿಂದ ಬಾಧಿತವಾಗಿಲ್ಲವೆಂದು ಲಿಖಿತದಲ್ಲಿ ಪ್ರಮಾಣೀಕರಿಸಿದರೆ, ಆ ಬಗ್ಗೆ ಯಾವುದಾದರೂ ಚಿಕಿತ್ಸೆ ಇದ್ದರೆ ಆ ಪಶುವನ್ನು ಚಿಕಿತ್ಸೆಗೆ ಒಳಪಡಿಸತಕ್ಕದ್ದು ಮತ್ತು ಅನ್ಯಥಾ ನಿಯಮಿಸಬಹುದಾದಂಥ ರೀತಿಯಲ್ಲಿ ವ್ಯವಹರಿಸತಕ್ಕದ್ದು.

(6) ಯಾವುದೇ ಪಶುವಿಗೆ ಸೋಂಕು ತಗುಲಿದೆಯೆಂಬ ಬಗ್ಗೆ ಅಥವಾ ಸೋಂಕು ಅಥವಾ ಸಾಂಕ್ರಾಮಿಕ ರೋಗ ಬಾಧಿತವಾಗುವುದೆಂದು ಸಂದೇಹಪಡಬಹುದಾದ ಪಶುವಿನ ಸಂಪರ್ಕದಲ್ಲಿತ್ತೆಂಬ ಅಥವಾ ಅದಕ್ಕೆ ಅತಿ ಹತ್ತಿರದಲ್ಲಿತ್ತೆಂಬ ಬಗ್ಗೆ, ಪಶು ವೈದ್ಯಾಧಿಕಾರಿಯ ತೀರ್ಮಾನವು ಅಂತಿಮವಾದುದಾಗಿರತಕ್ಕದ್ದು.

**7. ಪಶು ವೈದ್ಯಾಧಿಕಾರಿಯಿಂದ ಸೋಂಕು ಇರುವ ಖಾಸಗಿ ಸ್ಥಳಗಳ ಘೋಷಣೆ ಮತ್ತು ಅಂಥ ಸ್ಥಳಗಳ ತಪಾಸಣೆ**.-(1) ಇನ್ಸ್‌ಪೆಕ್ಟರನು ತಾತ್ಕಾಲಿಕವಾಗಿ ಅಥವಾ ಬೇರೆ ರೀತಿಯಲ್ಲಿ ಪಶುಗಳನ್ನು ಇರಿಸಲಾಗಿದ್ದ ಯಾವುದೇ ಭೂಮಿಯಲ್ಲಿ, ಕಟ್ಟಡದಲ್ಲಿ ಅಥವಾ ಇತರ ಸ್ಥಳದಲ್ಲಿ ಸೋಂಕು ತಗುಲಿದ ಪಶು ಇದೆಯೆಂದು ನಂಬಲು ಕಾರಣವಿದ್ದರೆ, ಆತನು ಕೂಡಲೇ ಲಿಖಿತ ಆದೇಶದ ಮೂಲಕ, ಅಂಥ ಭೂಮಿ, ಕಟ್ಟಡ, ಅಥವಾ ಸ್ಥಳವು ಸೋಂಕು ಇರುವ ಸ್ಥಳವಾಗಿದೆಯೆಂದು ಘೋಷಿಸತಕ್ಕುದು ಮತ್ತು ಆ ಆದೇಶದ ಒಂದು ಪ್ರತಿಯನ್ನು ಸೋಂಕು ಇರುವ ಸ್ಥಳದ ಮಾಲೀಕನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನವನ್ನು ಹೊಂದಿರುವ ವ್ಯಕ್ತಿಗೆ ತಲುಪಿಸತಕ್ಕದ್ದು ಮತ್ತು ತನ್ನ ಆ ಕ್ರಮದ ಬಗ್ಗೆ ಪಶು ವೈದ್ಯಾಧಿಕಾರಿಗೆ ವರದಿ ಮಾಡತಕ್ಕದ್ದು:

ಪರಂತು ಪಶುಗಳನ್ನು ಮಾರಾಟಕ್ಕಾಗಿ, ಪ್ರದರ್ಶನಕ್ಕಾಗಿ ಅಥವಾ ರವಾನೆಗಾಗಿ ತಾತ್ಕಾಲಿಕವಾಗಿ ಇಡಲಾಗಿದ್ದ ಸ್ಥಳೀಯ ಪ್ರಾಧಿಕಾರದ ಅಥವಾ ರೈಲ್ವೆ ಆಡಳಿತದ ಒಡೆತನದಲ್ಲಿದ್ದ ಅಥವಾ ಅವುಗಳ ನಿಯಂತ್ರಣ ಮತ್ತು ವ್ಯವಸ್ಥೆಯಲ್ಲಿದ್ದ ಯಾವುದೇ ಸ್ಥಳಕ್ಕೆ ಈ ಉಪ-ಪ್ರಕರಣವು ಅನ್ವಯವಾಗತಕ್ಕದ್ದಲ್ಲ.

(2) (1) ನೇ ಉಪ-ಪ್ರಕರಣದ ಮೇರೆಗೆ ವರದಿ ಸ್ವೀಕರಿಸಿದ ಮೇಲೆ ಪಶು ವೈದ್ಯಾಧಿಕಾರಿಯು ಆದಷ್ಟು ಬೇಗನೆ, ಸೋಂಕು ಇರುವ ಸ್ಥಳವನ್ನು ಮತ್ತು ಅದರಲ್ಲಿ ಇರಿಸಲಾಗಿದ್ದ ಪಶುಗಳನ್ನು ಪರೀಕ್ಷಿಸತಕ್ಕದ್ದು ಮತ್ತು ಇನ್ಸ್‌ಪೆಕ್ಟರನ ಆದೇಶವನ್ನು ಸ್ಥಿರೀಕರಿಸತಕ್ಕದ್ದು ಅಥವಾ ರದ್ದುಗೊಳಿಸತಕ್ಕದ್ದು.

(3) ಪಶು ವೈದ್ಯಾಧಿಕಾರಿಯು ಆ ಆದೇಶವನ್ನು ಸ್ಥಿರೀಕರಿಸಿದರೆ, ಸೋಂಕು ಇರುವ ಸ್ಥಳದಿಂದ ಒಂದು ಮೈಲಿಗೆ ಮೀರದ ತ್ರಿಜ್ಯದಲ್ಲಿರುವ ಪಶುಗಳನ್ನು ತಾತ್ಕಾಲಿಕವಾಗಿ ಅಥವಾ ಬೇರೆ ರೀತಿಯಾಗಿ ಇರಿಸಲಾಗಿದ್ದ ಎಲ್ಲ ಸ್ಥಳಗಳ ಮಾಲೀಕನಿಗೆ, ಆಧಿಭೋಗದಾರನಿಗೆ ಅಥವಾ ಅವುಗಳ ಸ್ವಾಧೀನ ಹೊಂದಿದ ವ್ಯಕ್ತಿಗೆ ಅಂಥ ಸ್ಥಳವು ಸೋಂಕು ಇರುವ ಸ್ಥಳವೆಂದು ಘೋಷಿಸಿ ಒಂದು ನೋಟೀಸನ್ನು ಜಾರಿ ಮಾಡಿಸಬಹುದು. ಪಶು ವೈದ್ಯಾಧಿಕಾರಿಯು ಕೂಡಲೇ ಈ ಉಪ-ಪ್ರಕರಣದ ಮೇರೆಗೆ ತಾನು ಕೈಗೊಂಡ ಕ್ರಮದ ಬಗ್ಗೆ ನಿಯಮಿಸಲಾದ ಪ್ರಾಧಿಕಾರಿಗೆ ವರದಿ ಮಾಡತಕ್ಕದ್ದು.

(4) ಪಶು ವೈದ್ಯಾಧಿಕಾರಿಯು, ಇನ್ಸ್‌ಪೆಕ್ಟರನು ಹೊರಡಿಸಿದ ಆದೇಶವನ್ನು ರದ್ದುಗೊಳಿಸಿದರೆ, ಆ ಆದೇಶದಲ್ಲಿ ಉಲ್ಲೇಖಿಸಿದ್ದ ಸ್ಥಳವು ಸಾಂಕ್ರಾಮಿಕ ಸ್ಥಳವಾಗಿರುವುದು ಕೊನೆಗೊಳ್ಳತಕ್ಕದ್ದು ಮತ್ತು ಇನ್ಸ್‌ಪೆಕ್ಟರನು, ಆ ಕಟ್ಟಡದ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನ ಹೊಂದಿರುವವನಿಗೆ ನೋಟೀಸಿನ ಮೂಲಕ ಅದನ್ನು ತಿಳಿಸತಕ್ಕದ್ದು.

**8. ಸೋಂಕು ಇರುವ ಸಾರ್ವಜನಿಕ ಸ್ಥಳದ ಘೋಷಣೆ.-** (1) ಪಶುಗಳನ್ನು ಮಾರಾಟ,ಪ್ರದರ್ಶನ ಅಥವಾ ರವಾನೆಯ ಉದ್ದೇಶಗಳಿಗಾಗಿ ತಾತ್ಕಾಲಿಕವಾಗಿ ಇರಿಸಲಾಗಿದ್ದ ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ರೈಲ್ವೆ ಆಡಳಿತದ ಒಡೆತನಕ್ಕೆ ಅಥವಾ ನಿಯಂತ್ರಣಕ್ಕೆ ಅಥವಾ ವ್ಯವಸ್ಥೆಗೆ ಸೇರಿದ ಯಾವುದೇ ಸ್ಥಳದಲ್ಲಿ ಸೋಂಕು ತಗುಲಿರುವಪಶು ಇದೆಯೆಂದು ಅಥವಾ ಇರಿಸಲಾಗಿದೆಯೆಂದು ನಂಬಲು ಪಶು ವೈದ್ಯಾಧಿಕಾರಿಗೆ ಕಾರಣವಿರುವಲ್ಲಿ, ಅವನು ಲಿಖಿತ ಆದೇಶದ ಮೂಲಕ ಅಂಥ ಸ್ಥಳವನ್ನು ಸೋಂಕು ತಗುಲಿರುವ ಸ್ಥಳವೆಂಬುದಾಗಿ ಘೋಷಿಸಬಹುದು.

(2) ಪಶು ವೈದ್ಯಾಧಿಕಾರಿಯು,-

(ಎ) (1) ನೇ ಉಪ-ಪ್ರಕರಣದ ಮೇರೆಗೆ ತಾನು ಹೊರಡಿಸಿದ ಆದೇಶದ ಪ್ರತಿಯನ್ನು ಆ ಸೋಂಕು ಇರುವ ಸ್ಥಳದಲ್ಲಿ ಎದ್ದು ಕಾಣುವ ಹಾಗೆ, ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವಂತೆ ಮಾಡತಕ್ಕದ್ದು.

(ಬಿ) ಆ ಆದೇಶದ ಒಂದು ಪ್ರತಿಯನ್ನು ಸಂದರ್ಭಾನುಸಾರ, ಸ್ಥಳೀಯ ಪ್ರಾಧಿಕಾರಿಯ ಕಾರ್ಯಾಲಯದಲ್ಲಿ ಅಥವಾ ರೈಲ್ವೆ ಆಡಳಿತದ ಅತಿ ಸಮೀಪದ ಸ್ಟೇಶನ್ ಮಾಸ್ತರನಿಗೆ ತಲುಪುವಂತೆ ಮಾಡತಕ್ಕದ್ದು.

(ಸಿ) ಅದರ ಇನ್ನೊಂದು ಪ್ರತಿಯನ್ನು ತೀರ ಸಮೀಪದ ಪೊಲೀಸ್ ಠಾಣೆಗೆ ಕಳುಹಿಸುವಂತೆ ಮಾಡತಕ್ಕದ್ದು; ಮತ್ತು

(ಡಿ) ತಾನು ತೆಗೆದುಕೊಂಡ ಕ್ರಮದ ಬಗ್ಗೆ ನಿಯಮಿಸಲಾದ ಪ್ರಾಧಿಕಾರಿಗೆ ಕೂಡಲೇ ವರದಿ ಮಾಡತಕ್ಕದ್ದು.

**9. ಸೋಂಕಿತ ಪ್ರದೇಶವೆಂದು ಘೋಷಿಸಲು ರಾಜ್ಯ ಸರಕಾರದ ಅಧಿಕಾರ.-**(1) 7ನೇ ಪ್ರಕರಣದ (3)ನೇ ಉಪ-ಪ್ರಕರಣದ ಅಥವಾ 8ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಪಶುವೈದ್ಯಾಧಿಕಾರಿಯ ವರದಿಯನ್ನು ಸ್ವೀಕರಿಸಿದ ಮೇಲೆ, ನಿಯಮಿಸಲಾದ ಪ್ರಾಧಿಕಾರಿಯು ತಾನು ಸೂಕ್ತವೆಂದು ಭಾವಿಸುವಂಥ ತನಿಖೆಯನ್ನು ಮಾಡಿದ ತರುವಾಯ, ಆ ಬಗ್ಗೆ ತನ್ನ ಅಭಿಪ್ರಾಯ

ಯಾವುದಾದರೂ ಇದ್ದರೆ, ಅದರೊಡನೆ ಅಂಥ ವರದಿಯನ್ನು ರಾಜ್ಯ ಸರಕಾರಕ್ಕೆ ಸಲ್ಲಿಸತಕ್ಕದ್ದು; ರಾಜ್ಯ ಸರ್ಕಾರವು,

(ಎ) 7ನೇ ಪ್ರಕರಣದ (1)ನೇ ಉಪ-ಪ್ರಕರಣದ, 7ನೇ ಪ್ರಕರಣದ (3)ನೇಯ ಉಪ-ಪ್ರಕರಣದ ಅಥವಾ 8ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಘೋಷಣೆಯನ್ನು, ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೇ ಸ್ಥಿರೀಕರಿಸಬಹುದು; ಅಥವಾ

(ಬಿ) ಅಂಥ ಯಾವುದೇ ಘೋಷಣೆಯನ್ನು ರದ್ದುಪಡಿಸಬಹುದು,

(2) (ಎ) ರಾಜ್ಯ ಸರಕಾರವು ಅಂಥ ಘೋಷಣೆಯನ್ನು ಮಾರ್ಪಾಟುಗಳೊಂದಿಗೆ ಅಥವಾ ಮಾರ್ಪಾಟುಗಳಿಲ್ಲದೆ ಸ್ಥಿರೀಕರಿಸಿದಲ್ಲಿ, ಅದು ಅಧಿಸೂಚನೆಯ ಮೂಲಕ ಅದರಲ್ಲಿ ಯಾವುದಾದರೂ ಮಾರ್ಪಾಟುಗಳು ಮಾಡಲಾಗಿದ್ದರೆ ಅವುಗಳೊಂದಿಗೆ ಅದು ಅನ್ವಯಿಸತಕ್ಕ ಪ್ರದೇಶದ ಪರಿಮಿತಿಗಳನ್ನು ಗುರುತಿಸಿ ಅಂಥ ಪ್ರದೇಶವನ್ನು ಸೋಂಕು ಇರುವ ಪ್ರದೇಶವೆಂಬುದಾಗಿ ಘೋಷಿಸತಕ್ಕದ್ದು;

(ಬಿ) ರಾಜ್ಯ ಸರಕಾರವು ಅಧಿಸೂಚನೆಯ ಮೂಲಕ ತಾನಾಗಿಯಾಗಲಿ ಅಥವಾ ನಿಯಮಿಸಲಾದ ಪ್ರಾಧಿಕಾರಿಯ ಮೂಲಕ ಪಶುವೈದ್ಯಾಧಿಕಾರಿಯು ಸಲ್ಲಿಸಿದ ಹೆಚ್ಚಿನ ವರದಿಯ ಮೇಲಾಗಲಿ, (ಎ) ಖಂಡದ ಮೇರೆಗೆ ಪ್ರಕಟಿಸಲಾದ ಯಾವುದೇ ಅಧಿಸೂಚನೆಯನ್ನು ಸೇರಿಸಬಹುದು, ತಿದ್ದುಪಡಿ ಮಾಡಬಹುದು, ವ್ಯತ್ಯಾಸ ಮಾಡಬಹುದು ಅಥವಾ ರದ್ದುಗೊಳಿಸಬಹುದು;

(ಸಿ) (ಎ) ಅಥವಾ (ಬಿ) ಖಂಡದ ಮೇರೆಗೆ ಅಧಿಸೂಚನೆಯ ಪ್ರಕಟಣೆಯ ತರುವಾಯ ಇನ್ಸ್‌ಪೆಕ್ಟರ್‌ನಿಂದ ಅಥವಾ ಪಶು ವೈದ್ಯಾಧಿಕಾರಿಯು ಸೋಂಕು ಇರುವ ಸ್ಥಳವೆಂದು ಘೋಷಿಸಲಾದ ಮತ್ತು ಅಂಥ ಅಧಿಸೂಚನೆಯಲ್ಲಿ ಪರಿಭಾಷಿಸಿದಂತೆ ಸೋಂಕಿತ ಪ್ರದೇಶದಲ್ಲಿ ಸೇರಿಸಲ್ಪಟ್ಟಿರದ ಯಾವುದೇ ಸ್ಥಳವು ಸೋಂಕಿತ ಸ್ಥಳವಾಗಿರುವುದು ಕೊನೆಗೊಳ್ಳತಕ್ಕದ್ದು; ಮತ್ತು ತದನುಸಾರವಾಗಿ ಇನ್ಸ್‌ಪೆಕ್ಟರನು ಅಂಥ ಸ್ಥಳದ ಒಡೆಯನಿಗೆ, ಅಧಿಭೋಗದಾರನಿಗೆ ಅಥವಾ ಅದರ ಸ್ವಾಧೀನ ಹೊಂದಿರುವ ಯಾರೇ ವ್ಯಕ್ತಿಗೆ ನೋಟೀಸು ನೀಡತಕ್ಕದ್ದು;

(ಡಿ) ಇನ್ಸ್‌ಪೆಕ್ಟರನು (ಎ) ಅಥವಾ (ಬಿ) ಖಂಡದ ಮೇರೆಗೆ ಹೊರಡಿಸಲಾದ ಅಧಿಸೂಚನೆಯ ಪ್ರತಿಯನ್ನು, ಸೋಂಕಿತ ಪ್ರದೇಶದಲ್ಲಿ ಎದ್ದುಕಾಣುವ ಸ್ಥಳದಲ್ಲಿ ಮತ್ತು ಸ್ಥಳೀಯ ಭಾಷೆಯಲ್ಲಿ ಪ್ರದರ್ಶಿಸುವಂತೆ ಮಾಡತಕ್ಕದ್ದು.

(3) ರಾಜ್ಯ ಸರಕಾರವು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಘೋಷಣೆಯನ್ನು ರದ್ದುಪಡಿಸಿದ್ದಲ್ಲಿ, ಅಂಥ ಘೋಷಣೆಯಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ಸ್ಥಳವು, ಸೋಂಕಿತ ಸ್ಥಳವಾಗಿರುವುದುಕೊನೆಗೊಳ್ಳತಕ್ಕದ್ದು ಮತ್ತು ತದನುಸಾರವಾಗಿ ಇನ್ಸ್‌ಪೆಕ್ಟರನು ಅಂಥ ಘೋಷಣೆಯ ಪ್ರತಿಗಳನ್ನು, ತಲುಪಿಸಿರುವ ಅಥವಾ ಅಂಥ ಘೋಷಣೆಗಳ ನೋಟೀಸುಗಳನ್ನು ಜಾರಿ ಮಾಡಿರುವ ಎಲ್ಲ ವ್ಯಕ್ತಿಗಳಿಗೆ ಆ ನೋಟೀಸು ನೀಡತಕ್ಕದ್ದು.

**10. ಪರವಾನಗಿಯಿಲ್ಲದೆ ಸೋಂಕು ಇರುವ ಪ್ರದೇಶಗಳಿಂದ ಅಥವಾ ಸ್ಥಳಗಳಿಂದ ಪಶುಗಳನ್ನು ಅಥವಾ ಇತರ ವಸ್ತುಗಳನ್ನು ತೆಗೆಯುವುದನ್ನು ಪ್ರತಿಬಂಧಿಸುವುದು.-** (1) ಈ ಹಿಂದೆ ಹೇಳಿರುವ ಉಪಬಂಧಗಳ ಮೇರೆಗೆ ಯಾವುದೇ ಪ್ರದೇಶವನ್ನು ಅಥವಾ ಸ್ಥಳವನ್ನು ಸೋಂಕು ಇರುವ ಪ್ರದೇಶವೆಂದು ಅಥವಾ ಸ್ಥಳವೆಂದು ಘೋಷಿಸಲಾಗಿರುವಲ್ಲಿ, ಅಂಥ ಘೋಷಣೆಯು ಜಾರಿಯಲ್ಲಿ ಇರುವಾಗ ಯಾರೇ ವ್ಯಕ್ತಿಯು ಜೀವಂತ ಅಥವಾ ಮೃತ ಯಾವುದೇ ಪಶುವನ್ನು ಅಥವಾ ಯಾವುದೇ ಪಶುವಿನ ಯಾವುದೇ ಭಾಗವನ್ನು ಅಥವಾ ಉತ್ಪನ್ನಗಳನ್ನು ಅಥವಾ ಪಶುವಿನ ಸಂಬಂಧದಲ್ಲಿ ಉಪಯೋಗಿಸಲಾದ ಯಾವುದೇ ಆಹಾರವನ್ನು, ಹಾಸನ್ನು ಅಥವಾ ಇತರೇ ವಸ್ತುಗಳನ್ನು ಇನ್ಸ್‌ಪೆಕ್ಟರನು ನೀಡಿದ ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಅಲ್ಲದೇ ತೆಗೆಯತಕ್ಕದ್ದಲ್ಲ.

(2) (1)ನೇ ಉಪ-ಪ್ರಕರಣದಲ್ಲಿ ಹೇಳಿದ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸೋಂಕು ಇರುವ ಪ್ರದೇಶದ ಅಥವಾ ಸ್ಥಳದ ಮುಖಾಂತರ ರೈಲಿನ ಮೂಲಕ ಸಾಗಿಸುವುದಕ್ಕೆ ಆ ಉಪ-ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

ಪರಂತು, ಸೋಂಕು ಇರುವ ಪ್ರದೇಶದ ಅಥವಾ ಸ್ಥಳದ ಮುಖಾಂತರವಾಗಿ ಅಂಥ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸಾಗಿಸುತ್ತಿರುವಾಗ ಅದನ್ನು ಅಲ್ಲಿ ಕೆಳಗಿಳಿಸಿದಲ್ಲಿ, (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಅದನ್ನು ಅಲ್ಲಿಂದ ಸಾಗಿಸತಕ್ಕದ್ದಲ್ಲ.

**11. ಪರವಾನಗಿ ಪಡೆಯದೇ ಸೋಂಕು ಇರುವ ಪ್ರದೇಶಗಳಿಂದ ತರಲಾದ ಪಶು ಇತ್ಯಾದಿಗಳನ್ನು ಹಿಂದಿರುಗಿಸುವುದಕ್ಕೆ ಅಗತ್ಯಪಡಿಸುವ ಅಧಿಕಾರ.-** 10ನೇ ಪ್ರಕರಣದಲ್ಲಿ ಉಲ್ಲೇಖಿಸಲಾದ ಯಾವುದೇ ಪಶುವನ್ನು ಅಥವಾ ವಸ್ತುವನ್ನು ಸದರಿ ಪ್ರಕರಣದ ಮೇರೆಗೆ ನೀಡಿದ ಲೈಸೆನ್ಸಿನ ಷರತ್ತುಗಳಿಗನುಸಾರವಾಗಿ ಅಲ್ಲದೇ ಅನ್ಯಥಾ ಸೋಂಕಿತ ಪ್ರದೇಶದಿಂದ ಅಥವಾ ಸ್ಥಳದಿಂದ ಸಾಗಿಸಲಾಗಿರುವಲ್ಲಿಯಾರೇ ಇನ್ಸ್‌ಪೆಕ್ಟರನು ಅಥವಾ ಪೊಲೀಸ್ ಅಧಿಕಾರಿಯು, ಅದನ್ನು ಅಂಥ ಪ್ರದೇಶಕ್ಕೆ ಅಥವಾ ಸ್ಥಳಕ್ಕೆ ಹಿಂದಿರುಗಿಸುವಂತೆ ಅಂಥ ಪಶುವಿನ ಅಥವಾ ವಸ್ತುವಿನ ಒಡೆಯನಿಗೆ ಅಥವಾ ಅದರ ಸ್ವಾಧೀನ ಹೊಂದಿರುವ ವ್ಯಕ್ತಿಗೆ ಅಗತ್ಯಪಡಿಸಹುದು:

ಪರಂತು, ಈ ಪ್ರಕರಣದಲ್ಲಿರುವ ಯಾವುದೂ,ಸೋಂಕು ತಗುಲಿದ ಪಶುಗಳ ಬಗ್ಗೆ ವ್ಯವಹರಿಸಲು 6ನೇಯ ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನಿಗೆ ಇರತಕ್ಕ ಅಧಿಕಾರಗಳಿಗೆ ಬಾಧಕವಾಗತಕ್ಕದ್ದಲ್ಲ.

**12. ಸೋಂಕು ಇರುವ ಸ್ಥಳಗಳಲ್ಲಿ ಮತ್ತು ಪ್ರದೇಶಗಳಲ್ಲಿ ರೋಗ ನಿರೋಧಕ ಲಸಿಕೆ ಅಥವಾ ಚುಚ್ಚುಮದ್ದು ಹಾಕುವುದು.-** (1) ಈ ಅಧಿನಿಯಮದ ಮೇರೆಗೆ ಸೋಂಕು ಇರುವ ಪ್ರದೇಶಅಥವಾ ಸ್ಥಳವೆಂದು ಘೋಷಿಸಲಾದ ಯಾವುದೇ ಪ್ರದೇಶದಲ್ಲಿ ಅಥವಾ ಸ್ಥಳದಲ್ಲಿ ಪಶು ವೈದ್ಯಾಧಿಕಾರಿಯು ಆಥವಾ ಪಶು ವೈದ್ಯಾಧಿಕಾರಿಯಿಂದ ಈ ಬಗ್ಗೆ ಯುಕ್ತವಾಗಿ ಅಧಿಕೃತಗೊಂಡ ಇನ್ಸ್‌ಪೆಕ್ಟರನು ರೋಗ ನಿರೋಧಕ ಲಸಿಕೆ ಅಥವಾ ಚುಚ್ಚುಮದ್ದು ಹಾಕುವುದು ಶಕ್ಯವಿರುವ ಅಥವಾ ಕಾರ್ಯಸಾಧ್ಯವಿರುವ ಎಲ್ಲಾ ಪ್ರಕರಣಗಳಲ್ಲಿ, ಆ ಪ್ರದೇಶದಲ್ಲಿ ಅಥವಾ ಸ್ಥಳದಲ್ಲಿ ಇರುವ ನಿಯಮಿಸಬಹುದಾದಂಥ ಪಶುಗಳ ವಿಧಗಳ ಅಥವಾ ವರ್ಗಗಳ ಪಶುಗಳಿಗೆ ಸಂದರ್ಭಾನುಸಾರ ಲಸಿಕೆ ಹಾಕತಕ್ಕದ್ದು, ಚುಚ್ಚುಮದ್ದುನೀಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಪಶುವಿನ ಒಡೆಯನು ಅಥವಾ ಅವುಗಳ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಅಂಥ ಲಸಿಕೆ ಹಾಕುವುದನ್ನು ಅಥವಾ ಚುಚ್ಚುಮದ್ದು ನೀಡುವ ಕಾರ್ಯದಲ್ಲಿ ಪಶುವೈದ್ಯಾಧಿಕಾರಿಗೆ ಅಥವಾ ಇನ್ಸ್‌ಪೆಕ್ಟರನಿಗೆ ಎಲ್ಲ ಸೌಕರ್ಯವನ್ನು ಅಥವಾ ಸಹಾಯವನ್ನು ನೀಡತಕ್ಕುದು.

(2) ಯಾವನೇ ಪಶುವಿಗೆ ಪಶು ವೈದ್ಯಾಧಿಕಾರಿಯು ಅಥವಾ ಇನ್ಸ್‌ಪೆಕ್ಟರನು ಲಸಿಕೆ ಹಾಕಿದಾಗ ಅಥವಾ ಚುಚ್ಚುಮದ್ದು ಹಾಕಿದಾಗ, ಗುರುತಿಸುವ ಸಲುವಾಗಿ, ನಿಯಮಿಸಬಹುದಾದಂಥ ರೀತಿಯಲ್ಲಿ ಆ ಪಶುವಿಗೆ ಗುರುತು ಹಾಕಬಹುದು.

**13. ನೌಕೆಗಳನ್ನು ಮತ್ತು ವಾಹನಗಳನ್ನು ಸ್ವಚ್ಛಮಾಡುವುದು ಮತ್ತು ಸೋಂಕು ಮುಕ್ತಗೊಳಿಸುವುದು.-** (1) ಸಾಮಾನ್ಯ ಸಾಗಾಟಗಾರನು ಪಶುಗಳ ಸಾಗಾಟಕ್ಕಾಗಿ ಉಪಯೋಗಿಸಿದ ಪ್ರತಿಯೊಂದು ನೌಕೆ ಅಥವಾ ವಾಹನವನ್ನು ನಿಯಮಿಸಬಹುದಾದಂಥ ಅವಧಿಗಳಲ್ಲಿ ಮತ್ತು ಅಂಥ ರೀತಿಯಲ್ಲಿ ಅವುಗಳನ್ನು ಸ್ವಚ್ಛಗೊಳಿಸತಕ್ಕದ್ದು ಮತ್ತು ಸೋಂಕು ಮುಕ್ತಗೊಳಿಸತಕ್ಕದ್ದು.

(2) ಇನ್ಸ್‌ಪೆಕ್ಟರನು ಅಂಥ ನೌಕೆಗಳನ್ನು ಅಥವಾ ಪಶುಗಳನ್ನು ಇಡಬಹುದಾದ ಮತ್ತು ಪರೀಕ್ಷಿಸಬಹುದಾದ ಸ್ಥಳಗಳನ್ನು ರಾಜ್ಯ ಸರಕಾರವು ಗೊತ್ತುಪಡಿಸಬಹುದು ಮತ್ತು ಅದು

ನಿರ್ಮಲವಾಗಿರದಿದ್ದರೆ, ಅದನ್ನು ನಿಯಮಿಸಲಾದ ರೀತಿಯಲ್ಲಿ ಸ್ವಚ್ಛಗೊಳಿಸಲು ಮತ್ತು ಸೋಂಕು ಮುಕ್ತಗೊಳಿಸಲು ಕೋರಬಹುದು.

(3) ಈ ಪ್ರಕರಣವು ಯಾವುದೇ ರೈಲ್ವೆಯ ರೈಲುಗಳಿಗೆ ಅನ್ವಯವಾಗತಕ್ಕದ್ದಲ್ಲ.

**14. ಸೋಂಕಿತ ಆವರಣಗಳನ್ನು, ನೌಕೆಗಳನ್ನು ಅಥವಾ ವಾಹನಗಳನ್ನು ಸೋಂಕು ಮುಕ್ತಗೊಳಿಸುವುದು.-** ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಪಶುವೈದ್ಯಾಧಿಕಾರಿಯು, ಲಿಖಿತ ಆದೇಶದ ಮೂಲಕ ಸೋಂಕು ತಗುಲಿದ ಪಶುವನ್ನು ಇಡಲಾಗಿದ್ದ ಯಾವುದೇ ಭೂಮಿಯ, ಕಟ್ಟಡದ ಅಥವಾ ಇತರ ಸ್ಥಳದ ಅಥವಾ ಯಾವುದೇ ನೌಕೆಯ ಅಥವಾ ವಾಹನದ ಒಡೆಯನಿಗೆ, ಆಧಿಭೋಗದಾರನಿಗೆ ಅಥವಾ ಅವುಗಳ ಸ್ವಾಧೀನ ಹೊಂದಿದ ವ್ಯಕ್ತಿಗೆ ಅಂಥ ಭೂಮಿಯನ್ನು, ಕಟ್ಟಡವನ್ನು, ಸ್ಥಳವನ್ನು ನೌಕೆಯನ್ನು ಅಥವಾ ವಾಹನವನ್ನು ಸೋಂಕು ಮುಕ್ತಗೊಳಿಸಬೇಕೆಂದು ಮತ್ತು ಅವುಗಳ ಒಳಜೋಡಣೆಗಳನ್ನು ಅಥವಾ ಅವುಗಳಲ್ಲಿ ಅಥವಾ ಅವುಗಳ ಸಮೀಪದಲ್ಲಿ ಕಂಡುಬಂದ ಇತರ ವಸ್ತುಗಳನ್ನು ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದ ರೀತಿಯಲ್ಲಿ ಮತ್ತು ಅಂಥ ಮಟ್ಟಿಗೆ ಸೋಂಕು ಮುಕ್ತಗೊಳಿಸಬೇಕೆಂದು ಅಥವಾ ನಾಶಗೊಳಿಸಬೇಕೆಂದು ಅಗತ್ಯಪಡಿಸಬಹುದು; ಅಂಥ ಒಡೆಯನು, ಆಧಿಭೋಗದಾರನು ಅಥವಾ ಸ್ವಾಧೀನ ಹೊಂದಿದ ವ್ಯಕ್ತಿಯು ಅಂಥ ಆದೇಶವನ್ನು ಪಾಲಿಸತಕ್ಕದ್ದು.

**15. ಮೃತ ದೇಹದ ಪರೀಕ್ಷೆ ನಡೆಸಲು ಪಶುವೈದ್ಯಾಧಿಕಾರಿಯ ಅಧಿಕಾರ:-** ಗೊತ್ತುಪಡಿಸಬಹುದಾದಂಥ ನಿಮಯಗಳಿಗೊಳಪಟ್ಟು ಪಶು ವೈದ್ಯಾಧಿಕಾರಿಯು ಮರಣ ಕಾಲದಲ್ಲಿ ಸೋಂಕು ತಗುಲಿದ್ದ ಅಥವಾ ಸೋಂಕು ತಗುಲಿತ್ತೆಂದು ಶಂಕಿಸಲಾದ ಯಾವುದೇ ಪಶುವಿನ ಮೃತದೇಹದ ಪರೀಕ್ಷೆಯನ್ನು ಮಾಡಬಹುದು ಅಥವಾ ಮಾಡುವಂತೆ ಮಾಡಬಹುದು ಮತ್ತು ಈ ಉದ್ದೇಶಕ್ಕಾಗಿ ಅವರು ಅಂಥ ಪಶುವಿನ ಮೃತದೇಹವನ್ನು ಹೊರತೆಗೆಸಬಹುದು.

**16. ಸೋಂಕು ಅಥವಾ ಸಾಂಕ್ರಾಮಿಕ ರೋಗಗಳ ವರದಿ ಮಾಡುವುದುಕೆಲವು ವ್ಯಕ್ತಿಗಳ ಕರ್ತವ್ಯ.**- ಪಶುವಿಗೆ ಸೋಂಕು ಅಥವಾ ಸಾಂಕ್ರಾಮಿಕ ರೋಗ ತಗುಲಿದೆಯೆಂದು ನಂಬಲು ತನಗೆ ಕಾರಣವಿದ್ದ ಅದರ ಪ್ರತಿಯೊಬ್ಬ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಮತ್ತು ಅದರ ಚಿಕಿತ್ಸೆಗಾಗಿ ಕರೆಯಲ್ಪಟ್ಟ ಪ್ರತಿಯೊಬ್ಬ ಪಶುವೈದ್ಯನು, ಆ ಪ್ರದೇಶದಲ್ಲಿ ಅಧಿಕಾರವ್ಯಾಪ್ತಿಯನ್ನು ಹೊಂದಿರುವ ಇನ್ಸ್‌ಪೆಕ್ಟರನಿಗೆ ಆ ಸಂಗತಿಯನ್ನು ಕೂಡಲೇ ವರದಿ ಮಾಡತಕ್ಕದ್ದು;

**17. ಸೋಂಕು ತಗುಲಿದ ಪಶುಗಳನ್ನು ಪ್ರತ್ಯೇಕಿಸಿಡಬೇಕಾದ ಕರ್ತವ್ಯ.-**ಪಶುವಿಗೆ ಸೋಂಕು ತಗುಲಿದೆಯೆಂದು ನಂಬಲು ತನಗೆ ಕಾರಣವಿದ್ದ ಅದರ ಪ್ರತಿಯೊಬ್ಬ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು, ಸಾಧ್ಯವಾದಷ್ಟು ಬೇಗನೆ ಅಂಥ ಪಶುವನ್ನು ಸೋಂಕು ತಗುಲಿರದ ಇತರ ಎಲ್ಲ ಪಶುಗಳಿಂದ ಪ್ರತ್ಯೇಕವಾಗಿರುವ ಸ್ಥಳದಲ್ಲಿ ಅದನ್ನು ಪ್ರತ್ಯೇಕಿಸಿ ಇಡತಕ್ಕದ್ದು ಮತ್ತು ಸೋಂಕು ತಗುಲಿರದ ಯಾವುದೇ ಪಶುವು ಅಂಥ ಸೋಂಕು ತಗುಲಿದ ಪಶುವಿನ ಸಂಪರ್ಕಕ್ಕೆ ಬಾರದಂತೆ ಅಥವಾ ಅದರ ಸಮೀಪಕ್ಕೆ ಹೋಗದಂತೆ ತಡೆಯುವ ಬಗ್ಗೆ ಸಾಧ್ಯವಾದ ಎಲ್ಲ ಕ್ರಮಗಳನ್ನು ಕೈಕೊಳ್ಳತಕ್ಕದ್ದು.

**18. ಪ್ರವೇಶಿಸಲು ಮತ್ತು ತಪಾಸಣೆ ಮಾಡಲು ಅಧಿಕಾರಗಳು.-** ನಿಯಮಿಸಬಹುದಾದಂಥ ನಿಯಮಗಳಿಗೊಳಪಟ್ಟು, ಯಾರೇ ಇನ್ಸ್‌ಪೆಕ್ಟರನು ಅಥವಾ ಪಶುವೈದ್ಯಾಧಿಕಾರಿಯು, ಈ ಅಧಿನಿಯಮದ ಮೂಲಕ ಅಥವಾ ಇದರ ಮೇರೆಗೆ ತನಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವ ಅಥವಾ ವಿಧಿಸಿದಲಾದ ಕರ್ತವ್ಯಗಳನ್ನು ನಿರ್ವಹಿಸುವ ಉದ್ದೇಶಕ್ಕಾಗಿ ಯಾವುದೇ ಭೂಮಿಯಲ್ಲಿ, ಕಟ್ಟಡದಲ್ಲಿ ಅಥವಾ ಸ್ಥಳದಲ್ಲಿ ಅಥವಾ ಯಾವುದೇ ನೌಕೆಯಲ್ಲಿ ಅಥವಾ ವಾಹನದಲ್ಲಿ ಪ್ರವೇಶಿಸಬಹುದು ಮತ್ತು ಅವುಗಳನ್ನು ಪರಿಶೀಲಿಸಬಹುದು.

**19. ಸೋಂಕು ತಗುಲಿದ ಪಶುಗಳ ಮೃತದೇಹಗಳನ್ನು ಹೂಳುವ ಅಥವಾ ವಿಲೆ ಮಾಡುವ ರೀತಿ.-** (1) ಆ ಪಶು ಸಾಯುವಾಗ ಸೋಂಕು ತಗುಲಿದ್ದ ಅಥವಾ ಸೋಂಕು ತಗುಲಿರುವ ಬಗ್ಗೆ ಸಂಶಯ ವ್ಯಕ್ತ ಪಡಿಸಲಾದ ಪ್ರತಿಯೊಂದು ಪಶುವನ್ನು ಭೂಮಿಯ ಮೇಲ್ಭಾಗದಿಂದ ಕನಿಷ್ಠ ಆರು ಅಡಿಗಳ ಕೆಳಗೆ ಹೂಳತಕ್ಕದ್ದು ಅಥವಾ ನಿಯಮಿಸಬಹುದಾದ ಬೇರೆ ರೀತಿಯಲ್ಲಿ ಅದರ ವಿಲೇವಾರಿ ಮಾಡತಕ್ಕದ್ದು.

(2) 15ನೇಯ ಪ್ರಕರಣದ ಮೇರೆಗೆ ಮೃತ ದೇಹವನ್ನು ಹೊರ ತೆಗೆಯುವ ಪ್ರಕರಣದಲ್ಲಿ ಹೊರತುಪಡಿಸಿ, (1)ನೇ ಉಪ-ಪ್ರಕರಣದ ಉಪಬಂಧಗಳಿಗನುಸಾರವಾಗಿ ಹೂಳಲಾದ ಪಶುವಿನ ಮೃತ ದೇಹವನ್ನು ಯಾರೇ ವ್ಯಕ್ತಿಯು ಹೊರತೆಗೆಯತಕ್ಕದ್ದಲ್ಲ ಅಥವಾ ಬೇರೆ ರೀತಿಯಲ್ಲಿ ಸ್ಥಳಾಂತರಿಸತಕ್ಕದ್ದಲ್ಲ.

**20. ಸೋಂಕು ಇರುವ ಪ್ರದೇಶಗಳಲ್ಲಿ ಸಂತೆ, ಜಾತ್ರೆ, ಇತ್ಯಾದಿಗಳಿಗೆ ನಿಷೇಧ**.-ಯಾರೇ ವ್ಯಕ್ತಿಯು ಸೋಂಕು ಇರುವ ಯಾವುದೇ ಪ್ರದೇಶದಲ್ಲಿ ಅಥವಾ ವ್ಯಾಪಾರದ ಉದ್ದೇಶಕ್ಕಾಗಿ ಆಗಲೀ ಯಾವುದೇ ಪಶು ಸಂತೆಯನ್ನು, ಪಶು ಜಾತ್ರೆಯನ್ನು, ಪಶು ಪ್ರದರ್ಶನವನ್ನು ಅಥವಾ ಪಶುಗಳ ಇತರ ಬಗೆಯ ಒಟ್ಟುಗೂಡಿಸುವಿಕೆಯನ್ನು ಜಿಲ್ಲಾಧಿಕಾರಿಗಳ ಅಥವಾ ಈ ಬಗ್ಗೆ ರಾಜ್ಯ ಸರಕಾರದಿಂದ ಅಧಿಕೃತಗೊಂಡ ಯಾರೇ ಅಧಿಕಾರಿಯ ಲಿಖಿತ ಅನುಮತಿಯಿಲ್ಲದೆ ಆಯೋಜಿಸತಕ್ಕದ್ದಲ್ಲ, ಪ್ರೋತ್ಸಾಹಿಸತಕ್ಕದ್ದಲ್ಲ ಅಥವಾ ನಡೆಸತಕ್ಕದ್ದಲ್ಲ.

**21. ಸೋಂಕು ತಗುಲಿದ ಪಶುಗಳನ್ನು ಪರೀಕ್ಷೆಗೆ ಒಳಪಡಿಸಲು ಪಶು ವೈದ್ಯಾಧಿಕಾರಿಯ ಅಧಿಕಾರಗಳು.**-ಪಶುವಿಗೆ ಸೋಂಕು ತಗುಲಿದೆಯೆಂದು ಪಶು ವೈದ್ಯಾಧಿಕಾರಿಯು ಶಂಕಿಸಿದರೆ, ಅವನು ಅದನ್ನು ನಿಯಮಿಸಬಹುದಾದಂಥ ಪರೀಕ್ಷೆಗಳಿಗೆ ಒಳಪಡಿಸಬಹುದು ಮತ್ತು ಪರೀಕ್ಷೆಯನ್ನು ನಡೆಸುವಲ್ಲಿ ಅವನಿಗೆ ಅಂಥ ಪಶುವಿನ ಒಡೆಯನು ಅಥವಾ ಅದರ ಸ್ವಾಧೀನವನ್ನು ಅಥವಾ ನಿಯಂತ್ರಣವನ್ನು ಹೊಂದಿರುವ ವ್ಯಕ್ತಿಯು ಪ್ರತಿಯೊಂದು ಸೌಕರ್ಯವನ್ನು ಅಥವಾ ಸಹಾಯವನ್ನು ಒದಗಿಸತಕ್ಕದ್ದು.

## ಅಧ್ಯಾಯ – III
## ಅಪರಾಧಗಳು ಮತ್ತು ದಂಡನೆ

**22. ದಂಡಗಳು.**-ಯಾರೇ ವ್ಯಕ್ತಿಯು,-

(ಎ) 5ನೇ ಪ್ರಕರಣದ ಮೇರೆಗೆ ಹೊರಡಿಸಲಾದ ಯಾವುದೇ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಲಾದ ನಿರ್ದೇಶನಗಳನ್ನು ಕಾರ್ಯಗತಗೊಳಿಸಲು ತಪ್ಪಿದ್ದಲ್ಲಿ ಅಥವಾ ಅದರ ನಿಬಂಧನೆಗಳನ್ನು ಉಲ್ಲಂಘಿಸಿದ್ದಲ್ಲಿ, ಅಥವಾ

(ಬಿ) 6ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನು ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದ್ದಲ್ಲಿ, ಅಥವಾ

(ಸಿ) ಸೋಂಕು ಇರುವ ಪ್ರದೇಶದಿಂದ ಅಥವಾ ಸ್ಥಳದಿಂದ ಯಾವುದೇ ಪಶುವನ್ನು ಅಥವಾ ವಸ್ತುವನ್ನು 10ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಾಗಿಸಿದ್ದಲ್ಲಿ ಅಥವಾ

(ಡಿ) 11ನೇ ಪ್ರಕರಣದ ಮೇರೆಗೆ ಇನ್ಸ್‌ಪೆಕ್ಟರನು ಅಥವಾ ಪೊಲೀಸ್ ಅಧಿಕಾರಿಯು ಕೊಟ್ಟ ಯಾವುದೇ ನಿರ್ದೇಶವನ್ನು ಪಾಲಿಸಲು ತಪ್ಪಿದ್ದಲ್ಲಿ, ಅಥವಾ

(ಇ) 12ನೇ ಪ್ರಕರಣವು ಅಗತ್ಯಪಡಿಸುವಂಥ ಪ್ರತಿಯೊಂದು ಸೌಕರ್ಯವನ್ನು ಮತ್ತು ಸಹಾಯವನ್ನು ಪಶು ವೈದ್ಯಾಧಿಕಾರಿಗೆ ಒದಗಿಸಲು ತಪ್ಪಿದ್ದಲ್ಲಿ, ಅಥವಾ

(ಎಫ್) 13ನೇ ಪ್ರಕರಣದ (1)ನೇ ಮತ್ತು (2)ನೇ ಉಪ-ಪ್ರಕರಣಗಳ ಮೇರೆಗೆ ಅಗತ್ಯಪಡಿಸಲಾದಂತೆ, ಪಶುಗಳನ್ನು ಸಾಗಿಸುವುದಕ್ಕಾಗಿ ಉಪಯೋಗಿಸಲಾದ ಯಾವುದೇ ನೌಕೆಯನ್ನು ಅಥವಾ ವಾಹನವನ್ನು ನಿಯಮಿಸಲಾದ ರೀತಿಯಲ್ಲಿ ಸ್ವಚ್ಛಗೊಳಿಸಲು ಅಥವಾ ಸೋಂಕು ಮುಕ್ತಗೊಳಿಸಲು ತಪ್ಪಿದ್ದಲ್ಲಿ, ಅಥವಾ

(ಜಿ) 14ನೇ ಪ್ರಕರಣದ ಮೇರೆಗೆ ಪಶು ವೈದ್ಯಾಧಿಕಾರಿಯು ಮಾಡಿದ ಆದೇಶವನ್ನು ಪಾಲಿಸಲು ತಪ್ಪಿದ್ದಲ್ಲಿ, ಅಥವಾ

(ಹೆಚ್) 16ನೇ ಪ್ರಕರಣವು ಅಗತ್ಯಪಡಿಸುವಂತೆ ಪಶುವಿಗೆ ಸೋಂಕು ತಗುಲಿದೆಯೆಂದು ವರದಿ ಮಾಡಲು ತಪ್ಪಿದ್ದಲ್ಲಿ, ಅಥವಾ

(ಐ) 17ನೇ ಪ್ರಕರಣವು ಅಗತ್ಯಪಡಿಸುವಂತೆ, ಯಾವುದೇ ಪಶುವನ್ನು ಪ್ರತ್ಯೇಕಿಸಿಡಲು ತಪ್ಪಿದ್ದಲ್ಲಿ, ಅಥವಾ

(ಜೆ) 19ನೇ ಪ್ರಕರಣದ ಯಾವುದೇ ಉಪಬಂಧಗಳನ್ನು ಉಲ್ಲಂಘಿಸಿದ್ದಲ್ಲಿ, ಅಥವಾ

(ಕೆ) 20ನೇ ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿ, ಸಂದರ್ಭಾನುಸಾರ, ಪಶು ಸಂತೆಯನ್ನು, ಪಶು ಜಾತ್ರೆಯನ್ನು, ಪಶು ಪ್ರದರ್ಶನವನ್ನು ಅಥವಾ ಯಾವುದೇ ರೀತಿಯ ಪಶುಗಳ ಒಟ್ಟುಗೂಡುವಿಕೆಯನ್ನು ಆಯೋಜಿಸಿದ್ದಲ್ಲಿ, ನಡೆಸಿದ್ದಲ್ಲಿ ಅಥವಾ ಪ್ರೋತ್ಸಾಹಿಸಿದ್ದಲ್ಲಿ-

-ಮೊದಲ ಅಪರಾಧ ನಿರ್ಣಯಕ್ಕಾಗಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಈ ಪ್ರಕರಣದ ಅದೇ ಖಂಡದ ಮೇರೆಗಿನ ಅಥವಾ ಯಾವುದೇ ಇತರೆ ಖಂಡದ ಮೇರೆಗಿನ ಎರಡನೇ ಅಥವಾ ಆ ತರುವಾಯದ ಅಪರಾಧ ನಿರ್ಣಯಕ್ಕಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**23. ಸೋಂಕು ತಗುಲಿದ ಪಶುಗಳನ್ನು ಆವರಣ ಹಾಕಿರದ ಭೂಮಿಯಲ್ಲಿ ಇರಿಸುವುದಕ್ಕಾಗಿ ಅಥವಾ ಮೇಯಿಸುವುದಕ್ಕಾಗಿ ದಂಡ.**-ಯಾರೇ ವ್ಯಕ್ತಿಯು ಯಾವುದೇ ಪಶುವಿಗೆ ಸೋಂಕು ತಗುಲಿದೆಯೆಂದು ಗೊತ್ತಿದ್ದು, ಇನ್ನೊಬ್ಬ ವ್ಯಕ್ತಿಯು ತಮ್ಮ ಪಶುಗಳನ್ನು ಇರಿಸುವುದಕ್ಕಾಗಿ ಅಥವಾ ಮೇಯಿಸುವುದಕ್ಕಾಗಿ ಹಕ್ಕು ಹೊಂದಿರುವ ಯಾವುದೇ ಪ್ರದೇಶ, ಆರಣ್ಯ, ಬಯಲು ಪ್ರದೇಶ, ರಸ್ತೆಯ ಅಕ್ಕಪಕ್ಕ ಅಥವಾ ಇತರೇ ಆವರಣ ಹಾಕಿರದ ಜಮೀನಿನಲ್ಲಿ ಆ ಪಶುವನ್ನು ಇರಿಸಿದರೆ ಅಥವಾ ಮೇಯಿಸಿದರೆ ಅವನು ಮೊದಲ ಸಲದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ ಆ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**24. ಸೋಂಕು ತಗುಲಿದ ಪಶುಗಳನ್ನು ಸಂತೆಗೆ ತರುವುದಕ್ಕಾಗಿ ದಂಡ.**- ಯಾವನೊಬ್ಬನು ಯಾವುದೇ ಪಶುವಿಗೆ ಸೋಂಕು ತಗುಲಿದೆಯೆಂದು ತಾನು ಅರಿತಿದ್ದು ಅಥವಾ ಹಾಗೆಂದು ನಂಬಲು ಕಾರಣವಿದ್ದು ಆ ಪಶುವನ್ನು ಸಂತೆಗೆ, ಜಾತ್ರೆಗೆ, ಪ್ರದರ್ಶನಕ್ಕೆ ಅಥವಾ ಇತರ ಪಶುಗಳ ಒಟ್ಟು ಗೂಡುವಿಕೆಯ ಸ್ಥಳಕ್ಕೆ ಅದನ್ನು ತಂದರೆ ಅಥವಾ ತರಲು ಪ್ರಯತ್ನಿಸಿದರೆ ಅವರು ಮೊದಲ ಸಲದ ಅಪರಾಧ ನಿರ್ಣಯದ ಸಂದರ್ಭದಲ್ಲಿ, ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ

ಆ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**25. ಸೋಂಕು ತಗುಲಿದ ಪಶುವಿನ ಮೃತದೇಹವನ್ನು ನದಿ ಇತ್ಯಾದಿಗಳಲ್ಲಿ ಬಿಸಾಕಿದ್ದಕ್ಕಾಗಿ ದಂಡ.-**ಯಾರೇ ವ್ಯಕ್ತಿಯು, ಪಶುವು ಅದು ಸಾಯುವ ಸಮಯದಲ್ಲಿ ಅದಕ್ಕೆ ಸೋಂಕು ತಗುಲಿದ್ದ ಅಥವಾ ಸೋಂಕು ತಗುಲಿರುವುದರಿಂದ ಅದನ್ನು ಸಾಯಿಸಲಾಗಿದ್ದ ಅಥವಾ ಸೋಂಕು ತಗುಲಿದೆಯೆಂದು ಶಂಕಿಸಲಾಗಿದ್ದು ಅಂಥ ಪಶುವಿನ ಮೃತ ದೇಹವನ್ನು ಅಥವಾ ಆ ಮೃತ ದೇಹದ ಯಾವುದೇ ಭಾಗವನ್ನು ಯಾವುದೇ ನದಿಯಲ್ಲಿ, ಸರೋವರದಲ್ಲಿ, ಕಾಲುವೆಯಲ್ಲಿ ಅಥವಾ ಇತರೇ ನೀರಿನಲ್ಲಿ ಅಥವಾ ನಿಯಮಿಸಬಹುದಾದಂತೆ ತೀರದಿಂದ ಅಂತಹ ಅಂತರದೊಳಗೆ ಸಮುದ್ರದಲ್ಲಿ ಬಿಸಾಕಿದ್ದರೆ ಅಥವಾ ಬಿಸಾಕುವಂತೆ ಮಾಡಿದರೆ, ಅಥವಾ ಬಿಸಾಕಲು ಅನುಮತಿಸಿದ್ದರೆ ಅವನು ಮೊದಲ ಅಪರಾಧ ನಿರ್ಣಯದ ಸಂದರ್ಭದಲ್ಲಿ ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸ ದಂಡ ಅಥವಾ ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವೆರಡರಿಂದಲೂ ಮತ್ತು ಎರಡನೇಯ ಅಥವಾ ಆ ತರುವಾಯದ ಅಪರಾಧ ನಿರ್ಣಯದ ಸಂಬಂಧದಲ್ಲಿ ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ ದಂಡ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

**26. ರೋಗಗ್ರಸ್ತ ಪಶುವಿನ ಮೃತದೇಹವನ್ನು ಅಗೆದು ತೆಗೆಯುವುದಕ್ಕಾಗಿ ದಂಡ.**-ಯಾರೇ ವ್ಯಕ್ತಿಯು, ಪಶುವು ಅದು ಸಾಯುವ ಸಮಯದಲ್ಲಿ ಅದಕ್ಕೆ ಸೋಂಕು ತಗುಲಿದ್ದ ಅಥವಾ ಸೋಂಕು ತಗುಲಿರುವುದರಿಂದ ಅದನ್ನು ಸಾಯಿಸಲಾಗಿದ್ದ ಅಂಥ ಯಾವುದೇ ಪಶುವಿನ ಮೃತ ದೇಹವನ್ನು ಅಥವಾ ಆ ಮೃತ ದೇಹದ ಯಾವುದೇ ಭಾಗವನ್ನು ಕಾನೂನುಬದ್ಧ ಅಧಿಕಾರವಿಲ್ಲದೆ ಅಗೆದು ತೆಗೆದರೆ ಅಥವಾ ತೆಗೆಯಿಸಿದರೆ ಅವನು ಮೊದಲ ಸಲದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ ಮತ್ತು ಎರಡನೇ ಅಥವಾ ಆ ತರುವಾಯದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**27. ಸೋಂಕು ತಗುಲಿದ ಪಶುಗಳ ಮಾರಾಟ ಅಥವಾ ಹಸ್ತಾಂತರಕ್ಕಾಗಿ ದಂಡ**.-ಯಾವನೊಬ್ಬನು, ಯಾವುದೇ ಪಶುವಿಗೆ ಸೋಂಕು ತಗುಲಿದೆಯೆಂದು ತನಗೆ ಗೊತ್ತಿದ್ದು ಅಥವಾ ಹಾಗೆ ನಂಬಲು ತನಗೆ ಕಾರಣವಿದ್ದ ಆ ಪಶುವನ್ನು ಮತ್ತೊಬ್ಬ ವ್ಯಕ್ತಿಗೆ ಮಾರಿದರೆ ಅಥವಾ ಮಾರಲು ಪ್ರಯತ್ನಿಸಿದರೆ ಅಥವಾ ಯಾವುದೇ ರೀತಿಯಲ್ಲಿ ಹಸ್ತಾಂತರಿಸಿದರೆ, ಅವನು ಮೊದಲ ಸಲದ ಅಪರಾಧ ನಿರ್ಣಯದ ಸಂದರ್ಭದಲ್ಲಿ ಒಂದು ನೂರು ರೂಪಾಯಿಗಳವರೆಗೆ, ಮತ್ತು ಎರಡನೇ ಅಥವಾ ಆ ತರುವಾಯದ ಅಪರಾಧ ನಿರ್ಣಯಕ್ಕಾಗಿ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**28. ಪೀಡನೆಗಾಗಿ ಪ್ರವೇಶ, ಪರಿಶೀಲನೆ ಅಥವಾ ವಶಪಡಿಸಿಕೊಳ್ಳುವಿಕೆ ಇವುಗಳ ಬಗ್ಗೆ ದಂಡ.-** (1) ಈ ಅಧಿನಿಯಮದ ಮೇರೆಗೆ ನೇಮಿಸಲಾದ ಇನ್ಸ್‌ಪೆಕ್ಟರ್ ಅಥವಾ ಪಶುವೈದ್ಯಾಧಿಕಾರಿಯು ಯಾವುದೇ ಜಮೀನನ್ನು, ಕಟ್ಟಡವನ್ನು ಅಥವಾ ಇತರ ಸ್ಥಳವನ್ನು, ಅಥವಾ ಯಾವುದೇ ನೌಕೆಯನ್ನು ಅಥವಾ ವಾಹನವನ್ನು ಪೀಡನಾಕಾರಿಯಾಗಿ ಅಥವಾ ಅನವಶ್ಯಕವಾಗಿ ಪ್ರವೇಶಿಸಿದರೆ ಅಥವಾ ಪರಿಶೀಲಿಸಿದರೆ ಅಥವಾ ಯಾವುದೇ ಪಶುವನ್ನು ವಶಪಡಿಸಿಕೊಂಡರೆ ಅಥವಾ ತಡೆದಿಟ್ಟರೆ, ಅವನು ಅಪರಾಧ ನಿರ್ಣಯದ ಬಳಿಕ, ಆರು ತಿಂಗಳುಗಳ ಅವಧಿಯವರೆಗೆ ವಿಸ್ತರಿಸಬಹುದಾದ ಕಾರಾವಾಸದ

ದಂಡನೆಯಿಂದ ಅಥವಾ ಐದು ನೂರು ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಅಥವಾ ಇವರೆಡರಿಂದಲೂ ದಂಡಿತನಾಗತಕ್ಕದ್ದು.

(2) ಅಪರಾಧ ನಡೆದ ದಿನಾಂಕದಿಂದ ಮೂರು ತಿಂಗಳುಗಳು ಕಳೆದ ತರುವಾಯ ಈ ಪ್ರಕರಣದ ಮೇರೆಗೆ ಯಾವುದೇ ಪ್ರಾಸಿಕ್ಯೂಷನ್ ಹೂಡತಕ್ಕದ್ದಲ್ಲ.

## ಅಧ್ಯಾಯ – IV
## ಸಂಕೀರ್ಣ

**29. ಆದೇಶಗಳ ಪಾಲನೆಗಾಗಿ ಮತ್ತು ಜಾರಿಗಾಗಿ ಕಾಲಾವಧಿ**:- (1) ಈ ಅಧಿನಿಯಮದ ಮೇರೆಗೆ ಅಥವಾ ಅದರ ಮೇರೆಗೆ ಹೊರಡಿಸಿದ ಯಾವುದೇ ನಿಯಮದ ಅಥವಾ ಅಧಿಸೂಚನೆಯ ಮೇರೆಗೆ ಮಾಡಲಾದ ಯಾವುದೇ ನೋಟೀಸಿನ, ಆಜ್ಞೆ ಅಥವಾ ಆದೇಶದ ಮೂಲಕ, ಯಾರೇ ವ್ಯಕ್ತಿಗೆ, ಅವನು ಒಡೆತನ ಹೊಂದಿದ ಅಥವಾ ಅವನ ಆಧಿಭೋಗದಲ್ಲಿದ್ದ ಅಥವಾ ಅವನು ಸ್ವಾಧೀನ ಹೊಂದಿರುವ ಯಾವುದೇ ಸ್ವತ್ತಿನ ಸಂಬಂಧದಲ್ಲಿ ಯಾವುದೇ ಕ್ರಮಕೈಕೊಳ್ಳಲು ಅಥವಾ ಯಾವುದೇ ಕಾರ್ಯ ಮಾಡಲು ಅಗತ್ಯಪಡಿಸಲಾದಲ್ಲಿ, ಸಂದರ್ಭಾನುಸಾರ ಅಂಥ ಕ್ರಮವನ್ನು ಕೈಕೊಳ್ಳತಕ್ಕ ಅಥವಾ ಅಂಥ ಕಾರ್ಯವನ್ನು ಮಾಡತಕ್ಕ ಒಂದು ಯುಕ್ತವಾದ ಅವಧಿಯನ್ನು ಅಂಥ ನೋಟೀಸಿನಲ್ಲಿ, ಆಜ್ಞೆಯಲ್ಲಿ ಅಥವಾ ಆದೇಶದಲ್ಲಿ ನಿರ್ದಿಷ್ಟಪಡಿಸತಕ್ಕದ್ದು.

(2) ಹಾಗೆ ನಿರ್ದಿಷ್ಟಪಡಿಸಿದ ಅವಧಿಯೊಳಗಾಗಿ ಅಂಥ ಕ್ರಮಗಳನ್ನು ಕೈಕೊಳ್ಳದಿದ್ದರೆ ಅಥವಾ ಅಂಥ ಕಾರ್ಯವನ್ನು ಮಾಡದಿದ್ದರೆ, ಆ ನೋಟೀಸನ್ನು ಆಜ್ಞೆಯನ್ನು ಅಥವಾ ಆದೇಶವನ್ನು ಹೊರಡಿಸಿದ ಪ್ರಾಧಿಕಾರಿಯು ಸಂಬಂಧಿತ ವ್ಯಕ್ತಿಯ ಖರ್ಚಿನಿಂದ ಆ ಕ್ರಮಗಳನ್ನು ಕೈಗೊಳ್ಳುವಂತೆ ಅಥವಾ ಆ ಕಾರ್ಯವನ್ನು ಮಾಡುವಂತೆ ಮಾಡಬಹುದು.

(3) (2)ನೇ ಉಪ-ಪ್ರಕರಣದ ಮೇರೆಗೆ ಕೈಕೊಳ್ಳಲಾದ ಯಾವುದೇ ಕ್ರಮಗಳ ಅಥವಾ ಮಾಡಲಾದ ಕಾರ್ಯದ ಖರ್ಚುಗಳನ್ನು, ಭೂ ಕಂದಾಯದ ಬಾಕಿ ಎಂಬಂತೆ ಸಂಬಂಧಿತ ವ್ಯಕ್ತಿಯಿಂದ ವಸೂಲು ಮಾಡತಕ್ಕದ್ದು.

**30. ವಾರಂಟು ಇಲ್ಲದೆ ದಸ್ತಗಿರಿ ಮಾಡಲು ಪೋಲೀಸ್ ಅಧಿಕಾರಿಯ ಅಧಿಕಾರ.**- ಪಶು ವೈದ್ಯಾಧಿಕಾರಿಯ ಲಿಖಿತ ಕೋರಿಕೆಯ ಮೇಲೆ ಸಬ್‌ಇನ್ಸ್‌ಪೆಕ್ಟರ್‌ನ ದರ್ಜೆಗಿಂತ ಕಡಿಮೆಯಿಲ್ಲದ ಯಾರೇ ಪೊಲೀಸ್ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧಕ್ಕೆ ಸಂಬಂಧಿಸಿದ ಯಾವನೇ ವ್ಯಕ್ತಿಯನ್ನು ವಾರಂಟು ಇಲ್ಲದೆ ದಸ್ತಗಿರಿ ಮಾಡಬಹುದು.

**31. ಅಪರಾಧಗಳ ಸಂಜ್ಞೇಯತೆ.**-ಯಾರೇ ಮ್ಯಾಜಿಸ್ಟ್ರೇಟನು ಪಶುವೈದ್ಯಾಧಿಕಾರಿಯ ಫಿರ್ಯಾದು ಅಥವಾ ವರದಿಯ ಮೇಲಲ್ಲದೆ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನುಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

**32. ಮ್ಯಾಜಿಸ್ಟ್ರೇಟರ ಅಧಿಕಾರ ವ್ಯಾಪ್ತಿ**.- ಈ ಅಧಿನಿಯಮದ ಮೇರೆಗೆ ಯಾವುದೇ ಅಪರಾಧದ ವಿಚಾರಣೆಯನ್ನು ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟನಾಗಲಿ ಅಥವಾ ಈ ಬಗ್ಗೆ ರಾಜ್ಯ ಸರಕಾರದಿಂದ ವಿಶೇಷವಾಗಿ ಶಕ್ತಗೊಳಿಸಲಾದ ದ್ವಿತೀಯ ದರ್ಜೆಯ ಮ್ಯಾಜಿಸ್ಟ್ರೇಟನಾಗಲೀ ಆಗಿರದ ಯಾವ ಮ್ಯಾಜಿಸ್ಟ್ರೇಟನೂ ಮಾಡತಕ್ಕದ್ದಲ್ಲ.

**33. ಪರಿಹಾರದ ಕ್ಲೇಮಿನ ಪ್ರತಿಬಂಧ.-**ಯಾರೇ ವ್ಯಕ್ತಿಯು, ಈ ಅಧಿನಿಯಮದ ಮೇರೆಗೆ ಸದ್ಭಾವನೆಯಿಂದ ಮಾಡಲಾದ ಯಾವುದೇ ಕಾರ್ಯದ ಕಾರಣದಿಂದ ಯಾವುದೇ ಪಶುವಿಗೆ ಅಥವಾ ವಸ್ತುವಿಗೆ ಆದ ನಾಶದ, ಅಥವಾ ತನಗುಂಟಾದ ಇತರ ಯಾವುದೇ ನಷ್ಟದ, ಗಾಯದ, ಹಾನಿ ಅಥವಾ ಅನಾನುಕೂಲದ ಸಂಬಂಧದಲ್ಲಿ ಯಾವುದೇ ಪರಿಹಾರಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

**34. ಈ ಅಧಿನಿಯಮದ ಮೇರೆಗೆ ಕ್ರಮ ಕೈಕೊಳ್ಳುವ ಅಧಿಕಾರಿಗಳ ರಕ್ಷಣೆ.**- (1) ಈ ಅಧಿನಿಯಮದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ, ರಾಜ್ಯ ಸರ್ಕಾರದ ಯಾರೇ ಅಧಿಕಾರಿ ಅಥವಾ ನೌಕರನ ವಿರುದ್ಧ ರಾಜ್ಯ ಸರ್ಕಾರದ ಪೂರ್ವ ಮಂಜೂರಾತಿ ಪಡೆಯದೇ ಯಾವುದೇ ಪ್ರಾಸಿಕ್ಯೂಷನ್ನಾಗಲೀ ಅಥವಾ ಇತರ ಯಾವುದೇ ವ್ಯವಹರಣೆಯಾಗಲೀ ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಮೂಲಕ ಅಥವಾ ಇದರ ಮೇರೆಗೆ ಅವನ ಕರ್ತವ್ಯಗಳ ಪಾಲನೆಯ ಅಥವಾ ಕಾರ್ಯಗಳ ನಿರ್ವಹಣೆಯ ಕಾಲದಲ್ಲಿ ಯಾವುದೇ ಕಾರ್ಯವನ್ನು ಸದ್ಭಾವನೆಯಿಂದ ಮಾಡಿದ್ದರೆ, ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಯಲ್ಲಿ ರಾಜ್ಯ ಸರಕಾರದ ಯಾವ ಅಧಿಕಾರಿಯೂ ಅಥವಾ ನೌಕರನೂ, ಅಂಥ ಯಾವುದೇ ಕಾರ್ಯದ ಬಗ್ಗೆ ಹೊಣೆಗಾರನಾಗಿರತಕ್ಕದ್ದಲ್ಲ.

**35. ಕೆಲವು ದಾವೆಗಳಿಗಾಗಿ ಮತ್ತು ಪ್ರಾಸಿಕ್ಯೂಷನ್‌ಗಳಿಗಾಗಿ ಕಾಲಮಿತಿ.-** ಈ ಅಧಿನಿಯಮದ ಮೇರೆಗೆ ಮಾಡಲಾದ ಅಥವಾ ಮಾಡಲಾಗಿದೆಯೆಂದು ಭಾವಿಸಲ್ಪಡುವ ಯಾವುದೇ ಕಾರ್ಯದ ಬಗ್ಗೆ, ಫಿರ್ಯಾದು ಮಾಡಲಾದ ಕಾರ್ಯದ ದಿನಾಂಕದಿಂದ 6 ತಿಂಗಳೊಳಗಾಗಿ ದಾವೆಯನ್ನು, ಪ್ರಾಸಿಕ್ಯೂಷನನ್ನು ಅಥವಾ ಇತರ ವ್ಯವಹರಣೆಯನ್ನು ಹೂಡಲಾಗಿದ್ದ ಹೊರತು ಅಂಥ ಯಾವುದೇ ಕಾರ್ಯದ ಸಂಬಂಧದಲ್ಲಿ ರಾಜ್ಯ ಸರಕಾರದ ವಿರುದ್ಧ ಯಾವುದೇ ದಾವೆ ಹೂಡತಕ್ಕದ್ದಲ್ಲ ಮತ್ತು ರಾಜ್ಯ ಸರಕಾರದ ಯಾರೇ ಅಧಿಕಾರಿಯ ಅಥವಾ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಯಾವ ವ್ಯವಹರಣೆಯನ್ನು ಹೂಡಲಾಗತಕ್ಕದ್ದಲ್ಲ.

**36. ನಿಯಮಗಳನ್ನು ರಚಿಸಲು ಅಧಿಕಾರ.-** (1) ರಾಜ್ಯ ಸರಕಾರವು, ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರುವ ಉದ್ದೇಶಕ್ಕಾಗಿ, ಪೂರ್ವ ಪ್ರಕಟಣೆಗೆ ಒಳಪಟ್ಟು ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ, ಅಂಥ ನಿಯಮಗಳು ಕೆಳಗಿನವುಗಳಿಗಾಗಿ ಉಪಬಂಧಿಸಬಹುದು.

(i) (4)ನೇ ಉಪ-ಪ್ರಕರಣದ ಮೇರೆಗೆ ಪಶುವನ್ನು ಒಪ್ಪಿಸಬಹುದಾದ ಪರೀಕ್ಷೆ; ಮತ್ತು 6ನೇ ಪ್ರಕರಣದ (5)ನೇ ಉಪ-ಪ್ರಕರಣದ ಮೇರೆಗೆ ಪಶುವಿನ ಬಗ್ಗೆ ವ್ಯವಹರಿಸಬಹುದಾದ ರೀತಿ;

(ii) 7, 8 ಮತ್ತು 9ನೇ ಪ್ರಕರಣಗಳ ಉದ್ದೇಶಗಳಿಗಾಗಿ ನಿಯಮಿಸಲಾಗುವ ಪ್ರಾಧಿಕಾರಿ.

(iii) ಇನ್ಸ್‌ಪೆಕ್ಟರನು 10ನೇ ಪ್ರಕರಣದ ಮೇರೆಗೆ ಲೈಸೆನ್ಸುಗಳನ್ನು ನೀಡಬಹುದಾದ ಸನ್ನಿವೇಶಗಳು ಮತ್ತು ಇಂಥ ಲೈಸೆನ್ಸುಗಳ ನಮೂನೆ ಮತ್ತು ಷರತ್ತು;

(iv) 12ನೇ ಪ್ರಕರಣದ (1)ನೇ ಉಪ-ಪ್ರಕರಣದಲ್ಲಿ ಹೇಳಲಾದ ಪ್ರತಿಯೊಂದು ಸೋಂಕು ಅಥವಾ ಸಾಂಕ್ರಾಮಿಕ ರೋಗದ ಸಂಬಂಧದಲ್ಲಿ ಲಸಿಕೆ ಹಾಕಬೇಕಾದ ಅಥವಾ ಚುಚ್ಚುಮದ್ದು ನೀಡಬೇಕಾದ ಪಶುಗಳ ಬಗೆ ಅಥವಾ ವರ್ಗಗಳು;

(v) 12ನೇ ಪ್ರಕರಣದ (2)ನೇ ಉಪ-ಪ್ರಕರಣದ ಮೇರೆಗೆ ಪಶುವಿಗೆ ಗುರುತು ಹಾಕಬಹುದಾದ ರೀತಿ;

(vi) 13ನೇ ಪ್ರಕರಣದ ಮೇರೆಗೆ ನೌಕೆಗಳನ್ನು ಮತ್ತು ವಾಹನಗಳನ್ನು ಸ್ವಚ್ಛಗೊಳಿಸತಕ್ಕ ಮತ್ತು ಸೋಂಕು ಮುಕ್ತಗೊಳಿಸತಕ್ಕ ಅವಧಿಗಳು ಮತ್ತು ರೀತಿ ;

(vii) 14ನೇ ಪ್ರಕರಣದ ಮೇರೆಗೆ ಭೂಮಿಯನ್ನು, ಕಟ್ಟಡವನ್ನು ಅಥವಾ ಇತರ ಸ್ಥಳಗಳನ್ನು ಅಥವಾ ವಾಹನಗಳನ್ನು ಅಥವಾ ನೌಕೆಯನ್ನುಸೋಂಕು ಮುಕ್ತಗೊಳಿಸುವುದು;

(viii) 15ನೇ ಪ್ರಕರಣದ ಮೇರೆಗೆ ಮೃತದೇಹ ಪರೀಕ್ಷೆ ಮಾಡುವುದು.

(ix) 18ನೇ ಪ್ರಕರಣದ ಮೇರೆಗೆ ಇನ್ಸಪೆಕ್ಟರನ ಅಥವಾ ಪಶುವೈದ್ಯಾಧಿಕಾರಿಯ ಅಧಿಕಾರಗಳನ್ನು ವಿನಿಮಯಗೊಳಿಸುವುದು.;

(x) 19ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಪಶುವನ್ನು ಹೂಳಬಹುದಾದ ರೀತಿ;

(xi) 25ನೇ ಪ್ರಕರಣದ ಮೇರೆಗೆ ದಂಡೆಯಿಂದ ಯಾವ ಅಂತರದೊಳಗಾಗಿ ಮೃತದೇಹವನ್ನು ಹಾಕತಕ್ಕದ್ದಲ್ಲವೋ ಆ ಅಂತರ ಮತ್ತು

(xii) ಈ ಅಧಿನಿಯಮದ ಮೂಲಕ ನಿಯಮಿಸಬೇಕಾದ ಸ್ಪಷ್ಟ ಅಗತ್ಯವಿರುವ ಅಥವಾ ಅದಕ್ಕೆ ಅವಕಾಶವಿರುವ ಎಲ್ಲ ಇತರ ವಿಷಯಗಳು.

**37. ನಿಯಮಗಳನ್ನು ಮತ್ತು ಅಧಿಸೂಚನೆಗಳನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡಬೇಕಾದುದು.**- 36ನೇ ಪ್ರಕರಣದ ಮೇರೆಗೆ ರಚಿಸಲಾದ ಎಲ್ಲಾ ನಿಯಮಗಳನ್ನು ಮತ್ತು 5ನೇಯ ಪ್ರಕರಣದ ಮೇರೆಗೆ ಹೊರಡಿಸಲಾದ ಎಲ್ಲ ಅಧಿಸೂಚನೆಗಳನ್ನು, ಅವುಗಳನ್ನು ಮಾಡಲಾದ ಅಥವಾ ಹೊರಡಿಸಲಾದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆಅದು ಅಧಿವೇಶನದಲ್ಲಿರುವಾಗ ಮತ್ತು ಆ ಅವಧಿಯ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ಅಧಿವೇಶನಗಳನ್ನು ಒಳಗೊಳ್ಳಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು; ಮತ್ತು ಸದರಿ ಅವಧಿಯು ಮುಗಿಯುವ ಮೊದಲು, ರಾಜ್ಯ ವಿಧಾನ ಮಂಡಲದ ಯಾವುದೊಂದು ಸದನವು ಈ ನಿಯಮಗಳಲ್ಲಿ ಅಥವಾ ಅಧಿಸೂಚನೆಗಳಲ್ಲಿ ಯಾವುದಾದರೂ ಮಾರ್ಪಾಟನ್ನು ಮಾಡಿದರೆ ಅಥವಾ ಯಾವುದೇ ನಿಯಮವು ಅಥವಾ ಅಧಿಸೂಚನೆಯು ಪರಿಣಾಮಿಯಾಗತಕ್ಕುದಲ್ಲವೆಂದು ನಿರ್ದೇಶಿಸಿದರೆ ಮತ್ತು ಆ ಮಾರ್ಪಾಟಿಗೆ ಅಥವಾ ನಿರ್ದೇಶಕ್ಕೆ ಇನ್ನೊಂದು ಸದನವು ಸಮ್ಮತಿಸಿದರೆ ಆ ನಿಯಮಗಳು ಅಥವಾ ಅಧಿಸೂಚನೆಗಳು ಆ ತರುವಾಯ ಸಂದರ್ಭಾನುಸಾರ, ಅಂಥ ಮಾರ್ಪಾಟಾದ ರೂಪದಲ್ಲಿ ಮಾತ್ರವೇ ಪರಿಣಾಮಿಯಾಗತಕ್ಕುದು, ಅಥವಾ ಪರಿಣಾಮಿಯಾಗಿರತಕ್ಕದ್ದಲ್ಲ.

**38. ನಿರಸನ ಮತ್ತು ಉಳಿಸುವಿಕೆಗಳು**.- [1][ಬೆಳಗಾವಿ ಪ್ರದೇಶದಲ್ಲಿ][1] ಜಾರಿಯಲ್ಲಿರುವಂತಹ ಮುಂಬಯಿ ಪಶುಗಳ ಸೋಂಕು ರೋಗಗಳ (ನಿಯಂತ್ರಣ) ಅಧಿನಿಯಮ 1948 (1948ರ ಮುಂಬಯಿ ಅಧಿನಿಯಮLIX), [1][ಮಂಗಳೂರು ಮತ್ತು ಕೊಳ್ಳೆಗಾಲ ಪ್ರದೇಶದಲ್ಲಿ][1] ಮದ್ರಾಸ್ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಮದ್ರಾಸ್ ಪಶು ರೋಗಗಳ ಅಧಿನಿಯಮ, 1866 (1866ರ ಮದ್ರಾಸ್ ಅಧಿನಿಯಮ II) ಮತ್ತು ಮದ್ರಾಸ್ ದೊಡ್ಡರೋಗ ಅಧಿನಿಯಮ, 1940 (1940 ರ ಮದ್ರಾಸ್ ಅಧಿನಿಯಮ XIX), ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವಂತಹ ಕೊಡಗು ಪಶುಗಳ ಸೊಂಕು ರೋಗಗಳ ಅಧಿನಿಯಮ 1941 (1941ರ ಕೊಡಗು ಅಧಿನಿಯಮ IV), ಕರ್ನಾಟಕ ಪ್ರದೇಶದಲ್ಲಿ ಜಾರಿಯಲ್ಲಿರುವಂತಹ ಕರ್ನಾಟಕ ಪಶು ರೋಗಗಳ ಅಧಿನಿಯಮ 1949 (1949ರ ಕರ್ನಾಟಕ ಅಧಿನಿಯಮ XXI), [1][ಬೆಳಗಾವಿ][1] ಮತ್ತು [1][ಮಂಗಳೂರು ಮತ್ತು ಕೊಳ್ಳೆಗಾಲಪ್ರದೇಶದಲ್ಲಿ][1] ಜಾರಿಯಲ್ಲಿರುವಂತಹ ಗ್ಲ್ಯಾಂಡರ್ಸ್ ಮತ್ತು ಫಾರ್ಸಿ ಅಧಿನಿಯಮ, 1899 (1899ರ ಕೇಂದ್ರ ಅಧಿನಿಯಮ XIII), ಮತ್ತು ಡೌರೀನ್ ಅಧಿನಿಯಮ, 1910 (1910ರ ಕೇಂದ್ರ ಅಧಿನಿಯಮ X), ಇವುಗಳನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

ಪರಂತು, [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899ರ (1899ರ ಕರ್ನಾಟಕ III ಅಧಿನಿಯಮ), 6ನೇ ಪ್ರಕರಣವು, ಸದರೀ ಅಧಿನಿಯಮಗಳ ನಿರಸನದ ಬಗ್ಗೆ ಅನ್ವಯಿಸತಕ್ಕದ್ದು; ಮತ್ತು [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899ರ 8 ಮತ್ತು 24ನೇ ಪ್ರಕರಣಗಳು, ಸದರಿ ಅಧಿನಿಯಮಗಳು [1][ಕರ್ನಾಟಕ ಅಧಿನಿಯಮ][1]ವೊಂದರಿಂದ ನಿರಸನಗೊಳಿಸಲ್ಪಟ್ಟಿದ್ದವು ಮತ್ತು ಪುನಃ ಅಧಿನಿಯಮಿತಗೊಳಿಸಲ್ಪಟ್ಟಿದ್ದವು ಎಂಬಂತೆ ಅನ್ವಯವಾಗತಕ್ಕದ್ದು.

1.ಕರ್ನಾಟಕ ಕಾನೂನುಗಳ ಅಳವಡಿಕೆಗಳ ಆದೇಶ, 1973ರ ಮೂಲಕ ದಿ.01.11.1973 ರಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳಲಾಗಿದೆ.

## ಅಧಿಸೂಚನೆ

I

ಬೆಂಗಳೂರು, ದಿನಾಂಕ 11ನೇ ಡಿಸಂಬರ್ 1963. [ಸಂ.ಆರ್‌ಡಿ 278 ವಿಎಡಿ 63]

ಮೈಸೂರು ಪಶುರೋಗಗಳ (ನಿಯಂತ್ರಣ) ಅಧಿನಿಯಮ, 1961ರ (1961ರ ಮೈಸೂರು ಅಧಿನಿಯಮ 18) 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಸೀತಾ ನದಿ ಮತ್ತು ನಡಪಾಳ್ ಹಳ್ಳಿಯನ್ನು ಹೊರತುಪಡಿಸಿ ಹೆಬ್ರಿ ಗ್ರಾಮ ಪ್ರದೇಶಗಳಲ್ಲಿ ದಿನಾಂಕ 26 ಡಿಸಂಬರ್ 1963 ರಂದು ಸದರಿ ಅಧಿನಿಯಮವು ಜಾರಿಗೆ ಬರತಕ್ಕದೆಂದು ಮೈಸೂರು ಸರ್ಕಾರವು ಈ ಮೂಲಕ ನಿರ್ದಿಷ್ಟಪಡಿಸಿದೆ.

ಮೈಸೂರು ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಹರಿಸರ್ವೋತ್ತಮ ರಾವ್)
ಸರ್ಕಾರದ ಅಧೀನ ಕಾರ್ಯದರ್ಶಿ

(ಕರ್ನಾಟಕ ಸರ್ಕಾರಿ ರಾಜ್ಯಪತ್ರ ಭಾಗIV-2c(i) ದಿನಾಂಕ: 19.12.1963ರಂದು ಪು.760ರಲ್ಲಿ ಪ್ರಕಟಿಸಲಾಗಿದೆ.)

II

ಬೆಂಗಳೂರು, ದಿನಾಂಕ: 17.02.2000. [ಸಂ.ಎಹೆಚ್‌ಎಫ್ 122 ಎಎಚ್‌ಪಿ 99]

ಕರ್ನಾಟಕ ಪಶುರೋಗಗಳ (ನಿಯಂತ್ರಣ) ಅಧಿನಿಯಮ, 1961ರ (1961ರ ಕರ್ನಾಟಕ ಅಧಿನಿಯಮ 18) 1ನೇ ಪ್ರಕರಣದ (3)ನೇ ಉಪ-ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ,ಕರ್ನಾಟಕ ಸರ್ಕಾರವು ಸದರಿ ಉಪ-ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಪ್ರದೇಶಗಳಲ್ಲಿ ಸದರಿ ಅಧಿನಿಯಮವು ದಿನಾಂಕ: 01.2.2000 ರಂದು ಜಾರಿಗೆ ಬರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕೆ.ಸಿ.ಜಯಲಕ್ಷ್ಮಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ

**ಕರ್ನಾಟಕ ಪಶುರೋಗಗಳ (ನಿಯಂತ್ರಣ) ಅಧಿನಿಯಮ, 1961ನ್ನು ಈ ಮುಂದಿನ ಅಧಿನಿಯಮಗಳನ್ನು ತಿದ್ದುಪಡಿಮಾಡಲಾಗಿದೆ, ಎಂದರೆ:-**

**ತಿದ್ದುಪಡಿಗಳು (ಕಾಲಾನುಕ್ರಮವಾಗಿ)**

| ಕ್ರ. ಸಂ. | ಅಧಿನಿಯಮ ಸಂ. ಮತ್ತು ವರ್ಷ | ತಿದ್ದುಪಡಿ ಮಾಡಲಾದ ಪ್ರಕರಣಗಳು | ಷರಾ |
|---|---|---|---|
| 1. | 1961ರ 18 | - | ದಕ್ಷಿಣ ಕನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನ ಸೀತಾ ನದಿ ಮತ್ತು ನಡಪಾಳ್ ಹಳ್ಳಿಯನ್ನು ಹೊರತುಪಡಿಸಿ ಹೆಬ್ರಿ ಗ್ರಾಮ ಪ್ರದೇಶಗಳಲ್ಲಿ ದಿನಾಂಕ 26 ಡಿಸಂಬರ್ 1963 ರಿಂದ ಮತ್ತು ಇತರ ಪ್ರದೇಶಗಳಲ್ಲಿ ದಿನಾಂಕ:01.02.2000 ರಿಂದಈ ಅಧಿನಿಯಮವು ಜಾರಿಗೆ ಬಂದಿದೆ. |
| 2 | ಕೆಎಎಲ್ ಆದೇಶ, 1973 | ಶೀರ್ಷಿಕೆ, ಪೀಠಿಕೆ, 1(1)(2) | ದಿ: 01.11.1973ರಿಂದ ಜಾರಿಗೆ ತರಲಾಗಿದೆ. |

**ತಿದ್ದುಪಡಿಗಳು (ಪ್ರಕರಣಾನುಸಾರ)**

| ಪ್ರಕರಣಗಳು | ಅಧಿನಿಯಮದ ಸಂಖ್ಯೆ ಮತ್ತು ವರ್ಷ | ಷರಾ |
|---|---|---|
| ಶೀರ್ಷಿಕೆ, ಪೀಠಿಕೆ | ಕೆಎಎಲ್ ಆದೇಶ, 1973 | ದಿ.01.11.1973 ರಿಂದ ಜಾರಿಗೆ ಬಂದಿದೆ. |
| 1(1)(2) | ಕೆಎಎಲ್ ಆದೇಶ, 1973 | ದಿ.01.11.1973 ರಿಂದ ಜಾರಿಗೆ ಬಂದಿದೆ. |

**************

The above translation of the Karnataka Animal Diseases (Control) Act, 1961 (Karnataka Act 18 of 1961) shall be authoritative text in the Kannada language under section 5A of the Karnataka Official Language Act, 1963 (Karnataka Act 26 of 1963).

**THAAWARCHAND GEHLOT**
**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**ಜಿ.ಶ್ರೀಧರ್**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಇಲಾಖೆ